# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 312 | ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | ಚಿತ್ರದುರ್ಗ | ದಿನಾಂಕ: 05–07–2024 ಶುಕ್ರವಾರ | ಪುಟ: 4 | ಬೆಲೆ : ರೂ.2–00
Volume - 01 Issue - 312 | Title- Code: KARKAN 28269 | Chitradurga | Date: 05-07-2024 Friday | Page: 4 | Price: Rs. 2-00



ಒಳಪುಟದ ಸುದ್ದಿಗಳು

ಐತಿಹಾಸಿಕ ಏಳು ಸುತ್ತಿನ ಕೋಟೆಗೆ ಧ್ವನಿ ಬೆಳಕಿನ ವೈಭವ: ಜಿಲ್ಲಾಧಿಕಾರಿ 2

ವಚನ ಸಾಹಿತ್ಯ ಮನೆ–ಮನ ತಲುಪಲಿ: ಅರವಿಂದ ಜತ್ತಿ 3

ನನ್ನ ಅಪ್ಪನಿಗೆ ಶುಭಾಶಯಗಳನ್ನು ಹೇಗೆ ಹೇಳಲಿ? 4



ಸುದ್ದಿ, ಜಾಹಿರಾತಿಗೆ
9686622252


### ಶುಭ ನುಡಿ

ಬಟ್ಟೆ ನೋಡಿ ಗೆಳೆತನ ಮಾಡಬೇಡ,
ಗುಣ ನೋಡಿ ಗೆಳೆತನ ಮಾಡು ,
ಯಾಕೆಂದರೆ ಬಟ್ಟೆ ಹರಿದು ಹೋಗುವ
ತನಕ ಮಾತ್ರ ಇರುತ್ತದೆ, ಗುಣ
ಸಾಯುವವರೆಗೂ ಇರುತ್ತದೆ !!

» ಶುಭೋದಯ

# ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಹುಡುಕಿ

» **ಚಳ್ಳಕೆರೆ**

ನಗರಸಭೆ ಸದಸ್ಯರು ತುರ್ತಾಗಿ ಸಭೆ ಕರೆಯುವಂತೆ ಮನವಿ ಮಾಡಿದರು. ಪರಶುರಾಮಪುರ ಹೋಬಳಿ ವ್ಯಾಪ್ತಿಯಲ್ಲಿ ಜಮೀನಿಗೆ ರಸ್ತೆ, ನಿವೇಶನ ಮನೆ ನಿರ್ಮಾಣ, ಚೆಕ್‌ಡ್ಯಾಂ ನಿರ್ಮಾಣ, ಖಾತೆ ಬದಲಾವಣೆ, ಸ್ಮಶಾನ ನಿರ್ಮಾಣ, ಕಾಲುವೇಹಳ್ಳಿ ಗ್ರಾಮದ ಕುಡಿಯುವ ನೀರಿನ ಸಮಸ್ಯೆಯೂ ಸೇರಿದಂತೆ ಹಲವಾರು ಸಮಸ್ಯೆಗಳಿಗೆ ಪರಿಹಾರ ನೀಡುವಂತೆ ನಡೆದ ಜನಸ್ಪಂದನಾ ಸಭೆಯಲ್ಲಿ ಮನವಿಗಳ ಮಹಾಪೂರವೇ ಹರಿದವು.

ಪ್ರಾರಂಭದಲ್ಲೇ ಜನಸ್ಪಂದನಾ ಸಭೆಯ ಉದ್ದೇಶವನ್ನು ತಿಳಿಸಿದ ಜಿಲ್ಲಾಧಿಕಾರಿ ವೆಂಕಟೇಶ್, ಸರ್ಕಾರ ಜನರ ಆಶಯಗಳಿಗೆ ತಕ್ಕಂತೆ ಹಲವಾರು ಯೋಜನೆ ರೂಪಿಸಿ ಅವುಗಳನ್ನು ಜಾರಿಗೊಳಿಸುವ ಮೂಲಕ ಜನರಿಗೆ ನೆರವಾಗುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಕೆಲ ಸಂದರ್ಭದಲ್ಲಿ ಮಾತ್ರ ಯಾವುದೇ ಸರ್ಕಾರಿ ಯೋಜನೆಗಳು ಜನರನ್ನು ತಲುಪುವಲ್ಲಿ ಸಾಧ್ಯವಾಗದೆ ಸರ್ಕಾರದ ಮೂಲ ಉದ್ದೇಶ ಈಡೇರಿದಂತೆಯಾಗುವುದಿಲ್ಲ. ಸಭೆಯಲ್ಲಿ ಸಾರ್ವಜನಿಕರ ಹಲವಾರು ಸಮಸ್ಯೆಗಳಿಗೆ ಪರಿಹಾರ ಹುಡುಕುವ ಕಾರ್ಯವನ್ನು ಜಿಲ್ಲಾಡಳಿತ ಪ್ರಾಮಾಣಿಕವಾಗಿ ಮಾಡಲಿದೆ ಎಂದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸೋಮಶೇಖರ್, ಗ್ರಾಮೀಣ ಭಾಗದ ಹಲವಾರು ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವ ನಿಟ್ಟಿನಲ್ಲಿ ಇಂತಹ



ಜನಸಂಪರ್ಕ ಸಭೆ ಜಿಲ್ಲಾಡಳಿತ ಮತ್ತು ಜನರ ನಡುವಿನ ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ. ಸಾರ್ವಜನಿಕರು ತಮ್ಮ ಯಾವುದೇ ಸಮಸ್ಯೆಗಳಿದ್ದಲ್ಲಿ ಅವುಗಳನ್ನು ಲಿಖಿತ ಮೂಲಕ ನೀಡಿದ್ದಲ್ಲಿ ಅವುಗಳಿಗೆ ಪರಿಹಾರ ಹುಡುಕುವ ಕೆಲಸ ಮಾಡಿದಂತಾಗುತ್ತದೆ. ಜಿಲ್ಲೆಯಾದ್ಯಂತ ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯನ್ನು ಹಮ್ಮಿಕೊಳ್ಳುವ ಮೂಲಕ ಗ್ರಾಮೀಣ ಭಾಗದ ಜನರಿಗೆ ಮಾನವ ದಿನಗಳ ನಿರ್ಮಿಸಿ ಕೊಡಲಾಗುತ್ತಿದೆ ಎಂದರು.

ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಟಿ.ರಘುಮೂರ್ತಿ, ಜನರ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳನ್ನು ಇಂದಿನ ಸಭೆಯಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡುವಂತೆ ಮನವಿ ಮಾಡಲಾಗಿತ್ತು. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಆಗಮಿಸಿ ಜನಸ್ಪಂದನಾ ಕಾರ್ಯಕ್ರಮದ ಮೂಲ ಉದ್ದೇಶಗಳ ಬಗ್ಗೆ ತಿಳಿಸಿ ಜನರಲ್ಲಿ ವಿಶ್ವಾಸ ಮೂಡಿಸುವಲ್ಲಿ ಸಫಲರಾಗಿದ್ದಾರೆ. ಈ ಕ್ಷೇತ್ರದ ಶಾಸಕನಾಗಿ ಸಾಕಷ್ಟು ಜನಸಂಪರ್ಕ ಸಭೆ ನಡೆಸಿ ಜನರ ಸಮಸ್ಯೆಗಳಿಗೆ ಪರಿಹಾರವನ್ನು ತಾಲ್ಲೂಕು ಮಟ್ಟದ ಅಧಿಕಾರಿಗಳಿಂದ ಕೊಡಿಸುವ ಕಾರ್ಯ ಮಾಡಿದ್ದೇನೆ. ಕೆಲವೊಂದು ವಿಚಾರಗಳು ಜಿಲ್ಲಾಮಟ್ಟದ ಅಧಿಕಾರಿಗಳ ಗಮನಕ್ಕೆ ತಂದು ಪರಿಹರಿಸಬೇಕಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿದ್ದಾರೆ, ಕ್ಷೇತ್ರ ವ್ಯಾಪ್ತಿಯಲ್ಲಿ ಸಾರ್ವಜನಿಕರು ಸರ್ಕಾರಕ್ಕೆ ನೀಡುವ ಮನವಿ ಹಾಗೂ ಇನ್ನಿತರೆ ವಿಚಾರಗಳ ಬಗ್ಗೆ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ಜನಸ್ಪಂದನಾ ಸಭೆಯಿಂದ ಜನರ ಸಂಕಷ್ಟಗಳು ದೂರವಾಗಬೇಕು, ಕೇವಲ ಜನರನ್ನು ಸೇರಿಸಿ ಭಾಷಣ ಮಾಡದೆ ಸಭೆಯಲ್ಲಿ ವ್ಯಕ್ತವಾಗುವ ಸಭೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಜನಸ್ಪಂದನಾ ಒಂದು ಉತ್ತಮ ಹೆಜ್ಜೆ ಎಂದರು.

ಉಪವಿಭಾಗಾಧಿಕಾರಿ ಎಂ.ಕಾರ್ತಿಕ್, ಜಿಲ್ಲಾ ಯೋಜನಾಧಿಕಾರಿ ಮಹೇಂದ್ರಕುಮಾರ್, ತಹಶೀಲ್ದಾರ್ ರೇಹಾನ್‌ಪಾಷ, ಇಒ ಶಶಿಧರ, ಬಿಇಒ ಕೆ.ಎಸ್.ಸುರೇಶ್, ಕೃಷಿಅಧಿಕಾರಿ ಅಶೋಕ್, ತೋಟಗಾರಿಕೆ ಅಧಿಕಾರಿ ವಿರೂಪಾಕ್ಷಪ್ಪ, ಡಿವೈಎಸ್ಪಿರಾಜಣ್ಣ,ಪೌರಾಯುಕ್ತಸಿ.ಚಂದ್ರಪ್ಪ, ಎಇಇ ದಯಾನಂದ, ಎನ್.ಕಾವ್ಯ, ವಿಜಯಭಾಸ್ಕರ, ನಾಮಿನಿ ಸದಸ್ಯರಾದ ಅನ್ವರ್‌ಮಾಸ್ಟರ್, ನೇತಾಜಿಪ್ರಸನ್ನ, ಬಡಗಿಪಾಪಣ್ಣ, ಭದ್ರಿ, ನಟರಾಜ್ ಮುಂತಾದವರು ಉಪಸ್ಥಿತರಿದ್ದರು.

## ಫಾಸ್ಟ್ ನ್ಯೂಸ್

### ಫಲಾನುಭವಿ ಆಧಾರಿತ ಯೋಜನೆಗಳಿಗೆ ವಿಕಲಚೇತನರಿಂದ ಅರ್ಜಿ

» **ಚಿತ್ರದುರ್ಗ**

2024–25ನೇ ಸಾಲಿಗೆ ವಿಕಲಚೇತನ ಹಾಗೂ ಹಿರಿಯ ನಾಗರೀಕ ಸಬಲೀಕರಣ ಇಲಾಖೆಯ 13 ಫಲಾನುಭವಿ ಆಧಾರಿತ ಯೋಜನೆಗಳನ್ನು ಡಿ.ಬಿ.ಟಿ (ನೇರ ನಗದು ವರ್ಗಾವಣೆ) ಆನ್‌ಲೈನ್ ವೇದಿಕೆ ತಂತ್ರಾಂಶದಡಿ ಅಳವಡಿಸಲಾಗಿದೆ. ಆದ್ದರಿಂದ ಜಿಲ್ಲೆಯ ವಿಕಲಚೇತನರು (ಅಂಗವಿಕಲರು) ಫಲಾನುಭವಿ ಆಧಾರಿತ ಯೋಜನೆಗಳಿಗೆ ಅರ್ಜಿ ಸಲ್ಲಿಸಬಹುದು. ಇದೇ ಜುಲೈ 1 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಿದ್ದು, ಆಗಸ್ಟ್ 31 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಫಲಾನುಭವಿ ಆಧಾರಿತ ಯೋಜನೆಗಳು: ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗಾಗಿ ಪ್ರೋತ್ಸಾಹಧನ ಯೋಜನೆ, ಶಿಶು ಪಾಲನಾ ಭತ್ಯೆ, ನಿರುದ್ಯೋಗ ಭತ್ಯೆ, ಆಧಾರ ಯೋಜನೆ, ಮರಣ ಪರಿಹಾರ ನಿಧಿ (ಎಂ.ಆರ್.ಡಬ್ಲ್ಯೂ ಮತ್ತು ವಿಆರ್‌ಡಬ್ಲ್ಯೂ) ಸಾಧನೆ ಯೋಜನೆ, ಪ್ರತಿಭೆ ಯೋಜನೆ, ವೈದ್ಯಕೀಯ ಪರಿಹಾರ ನಿಧಿ, ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ, ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನ ಯೋಜನೆ, ಸಾಧನೆ ಸಲಕರಣೆ ಯೋಜನೆ, ಶ್ರವಣದೋಷವುಳ್ಳ ವ್ಯಕ್ತಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರ ಯೋಜನೆ ಹಾಗೂ ದೃಷ್ಠದೋಷ ಹೊಂದಿರುವ ವಿಕಲಚೇನರಿಗೆ ಬ್ರೈಲ್ ಕಿಟ್ ಯೋಜನೆ ಸೇರಿದಂತೆ ಒಟ್ಟು 13 ಯೋಜನೆಗಳಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ಫಲಾನುಭವಿಗಳು ಯೋಜನೆಗಳಿಗೆ ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಸೇವಾಸಿಂಧು ಕೇಂದ್ರಗಳಲ್ಲಿ https://sevasindhu.karnataka.gov.in/sevasindhu/departmentserviceskannada ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಿದ ಹಾರ್ಡ್ ಪ್ರತಿಯನ್ನು ಆಯಾ ತಾಲ್ಲೂಕಿನ, ತಾಲ್ಲೂಕು ಪಂಚಾಯತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ, ವಿವಿದೊದ್ದೇಶ ಪುನರ್ವಸತಿ ಕಾರ್ಯಕರ್ತರು (ಎಂ.ಆರ್.ಡಬ್ಲ್ಯೂ) ಗಳಿಗೆ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ನಗರದ ಸ್ಟೇಡಿಯಂ ಹತ್ತಿರದ ಬಾಲಭವನ ಆವರಣದ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಯ ದೂರವಾಣಿ ಸಂಖ್ಯೆ 08194–235284 ಹಾಗೂ ತಾಲ್ಲೂಕು ವಾರು ಎಂ.ಆರ್.ಡಬ್ಲ್ಯೂಗಳ ದೂರವಾಣಿ ಸಂಖ್ಯೆ ಚಿತ್ರದುರ್ಗ  9880821934, ಚಳ್ಳಕೆರೆ  9611266930, ಹಿರಿಯೂರು  9902888901, 9902898901, ಹೊಳಲ್ಕೆರೆ  9740030227, ಹೊಸದುರ್ಗ –9741829990, ಮೊಳಕಾಲ್ಮೂರು –9742725576 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪಿಹೆಚ್‌ಡಿ ಫೆಲೋಶಿಪ್: ಅಲ್ಪಸಂಖ್ಯಾತ ಅಭ್ಯರ್ಥಿಗಳಿಂದ ಅರ್ಜಿ

» **ಚಿತ್ರದುರ್ಗ**

2024–25ನೇ ಸಾಲಿಗೆ ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯಗಳಲ್ಲಿ ಪೂರ್ಣಕಾಲಿಕವಾಗಿ ಪಿ.ಹೆಚ್.ಡಿ ಸಂಶೋಧನ ಕೈಗೊಳ್ಳುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೈದ್ದ, ಸಿಖ್ ಮತ್ತು ಪಾರ್ಸಿ ವಿದ್ಯಾರ್ಥಿಗಳಿಗೆ ಜೆ.ಆರ್.ಎಫ್ ಮಾದರಿಯಲ್ಲಿ ಫೆಲೋಶಿಫ್ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆಯ ದಿನವಾಗಿದೆ.ಆಸಕ್ತ ಅರ್ಹ ಅಭ್ಯರ್ಥಿಗಳು https://sevasindhu.karnataka.gov.in/sevasindhu/departmentservices ಜಾಲತಾಣದಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.

# ವಿಎಲ್‌ಟಿ, ಪ್ಯಾನಿಕ್ ಬಟನ್ ಅಳವಡಿಕೆ ಕಡ್ಡಾಯ

» **ಚಿತ್ರದುರ್ಗ**

ಸಾರ್ವಜನಿಕ ಸೇವೆಯ ಸಾರಿಗೆ ಹಾಗೂ ರಾಷ್ಟ್ರೀಯ ಹೆದ್ದಾರಿ ಸರಕು ಸಾಗಾಣಿಕೆ ವಾಹನಗಳಲ್ಲಿ ವಿಎಲ್‌ಟಿ (ವೆಹಿಕಲ್ ಲೊಕೇಷನ್ ಟ್ರಾಕಿಂಗ್) ಹಾಗೂ ಎಮರ್ಜನ್ಸಿ ಪ್ಯಾನಿಕ್ ಬಟನ್‌ನ್ನು ಅಳವಡಿಸುವುದು ಕಡ್ಡಾಯಗೊಳಿಸಿ ಸಾರಿಗೆ ಆಯುಕ್ತರು ಆದೇಶ ಹೊರಡಿಸಿದ್ದಾರೆ. ಆದೇಶದಂತೆ 2024 ಸೆಪ್ಟೆಂಬರ್ 10ರ ವರೆಗೆ ಉಪಕರಣಗಳನ್ನು ಅಳವಡಿಸಕೊಳ್ಳಬೇಕಿದೆ. ಇದರೊಂದಿಗೆ ಆಂಬುಲೇನ್ಸ್‌ಗಳಲ್ಲಿ ಜಿಪಿಎಸ್ ಅಳವಡಿಸಿಕೊಳ್ಳುವುದು ಕಡ್ಡಾಯವಾಗಿದೆ.

ಉಚ್ಛನ್ಯಾಯಾಲಯದ ಆದೇಶದಂತೆ ಕೆ.ಎಸ್.ಆರ್.ಟಿ.ಸಿ




ಹಾಗೂ ಖಾಸಗಿ ಬಸ್‌ಗಳಲ್ಲಿ ವಿಶೇಷ ಚೇತನರಿಗೆ ಪ್ರಯಾಣಯಕ್ಕೆ ಅನುಕೂವಾಗುವಂತೆ ಹತ್ತುವ ಮತ್ತು ಇಳಿಯುವ ವಿಶೇಷ ವ್ಯವಸ್ಥೆ ಹಾಗೂ ಅಂಧ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಮೈಕ್ ಮತ್ತು ಸ್ಪೀಕರ್ ಹೊಂದಿರುವ ಪಬ್ಲಿಕ್ ಅಡ್ರೆಸ್ ಸಿಸ್ಟಮ್ ಬಸ್ ನಿಲ್ದಾಣಗಳಲ್ಲಿ ಅಳವಡಿಸಬೇಕಿದೆ. ಮಕ್ಕಳ ಹಿತದೃಷ್ಠಿಯಿಂದ ಬೈಕ್ ಸವಾರಿಯ ವೇಳೆ 9 ತಿಂಗಳ ಮೇಲ್ಪಟ್ಟ ಹಾಗೂ 4 ವರ್ಷದ ಒಳಗಿನ ಮಕ್ಕಳಿಗೆ ಶಿಶು ಕವಚ ಕಡ್ಡಾಯಗೊಳಿಸಿದೆ. ಇಲ್ಲವಾದರೆ ರೂ.1000 ದಂಡ ವಿಧಿಸಲಾಗುವುದು. 2019 ಏಪ್ರಿಲ್ 01ರ ಹಿಂದೆ ನೋಂದಣಿಯಾಗಿರುವ ಎಲ್ಲಾ ವಾಹನಗಳಿಗೆ ಹೆಚ್.ಎಸ್.ಆರ್.ಪಿ ನೋಂದಣಿ ಫಲಕಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಲು ನಿಗದಿ ಪಡಿಸಿದ್ದ ಕಾಲವಕಾಶವನ್ನು 2024 ಸೆಪ್ಟೆಂಬರ್ 15ರ ವರೆಗೆ ವಿಸ್ತರಿಸಲಾಗಿದೆ ಎಂದು ಚಿತ್ರದುರ್ಗ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಾ.ಡಿ.ಎಂ.ಅಭಿನವ್‌ಗೆ ರಾಜ್ಯಮಟ್ಟದ ಶ್ರೇಷ್ಠ ಆರ್‌ಸಿಹೆಚ್ ಅಧಿಕಾರಿ ಪ್ರಶಸ್ತಿ

» **ಚಿತ್ರದುರ್ಗ**

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಡಿ.ಎಂ.ಅಭಿನವ್ ಅವರಿಗೆ ರಾಜ್ಯಮಟ್ಟದ



ಶ್ರೇಷ್ಠ ಆರ್‌ಸಿಹೆಚ್ ಅಧಿಕಾರಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಜುಲೈ 1ರಂದು ಬೆಂಗಳೂರಿನ ವಿಧಾನಸೌಧದ ಕೊಠಡಿ ಸಂಖ್ಯೆ 334ರಲ್ಲಿ ನಡೆದ ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಿಶ್ವ ವೈದ್ಯರ ದಿನಾಚರಣೆ ಪ್ರಯುಕ್ತ ಚಿತ್ರದುರ್ಗ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಡಿ.ಎಂ.ಅಭಿನವ್ ಅವರಿಗೆ ತಾಯಿ ಮಕ್ಕಳ ವಿಭಾಗದ ಉತ್ತಮ ಸಾಧನೆಗಾಗಿ ರಾಜ್ಯಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿಗೆ ಭಾಜನರಾದ ಡಾ.ಡಿ.ಎಂ.ಅಭಿನವ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಆರೋಗ್ಯ ಸಚಿವರು, ಇಲಾಖೆ ಮುಖ್ಯಸ್ಥರು ಶುಭ ಕೋರಿದರು.

## ಪ್ರಮುಖ ಸುದ್ದಿ

### ಹಸಿ ಕಸ ಮತ್ತು ಒಣ ಕಸ ಮನೆಯಲ್ಲಿ ವಿಂಗಡಿಸಿ ನೀಡುವ ಕಾರ್ಡ್: ರಾಜ್ಯದಲ್ಲಿ ಮೊದಲ ಬಾರಿಗೆ ಚಿತ್ರದುರ್ಗ ನಗರಸಭೆ ವಿತರಣೆ


# ನಗರಸಭೆಯಿಂದ ಕಸ ವಿಂಗಡಣೆಗೆ ವಿನೂತನ ಪ್ರಯೋಗ

» **ಚಿತ್ರದುರ್ಗ**

ಮನೆ, ಅಂಗಡಿಗಳಲ್ಲಿ ಹಸಿ ಕಸ ಮತ್ತು ಒಣ ಕಸ ವಿಂಗಡಿಸಿ ನೀಡುವ ಕಾರ್ಡ್‌ಗಳನ್ನು ರಾಜ್ಯದಲ್ಲಿಯೇ ಮೊದಲ ಬಾರಿಗೆ ಚಿತ್ರದುರ್ಗ ನಗರಸಭೆಯು ವಿತರಿಸಿದೆ.

ಚಿತ್ರದುರ್ಗ ನಗರಸಭೆ ವ್ಯಾಪ್ತಿಯ ಪ್ರತಿ ಮನೆಗಳಿಗೂ ಹಸಿ ಕಸ ಮತ್ತು ಒಣ ಕಸ ವಿಂಗಡಣೆ ಮಾಡಿ, ನಗರಸಭೆಯ ವಾಹನಗಳಿಗೆ ನೀಡುವ ಬಗ್ಗೆ "ಸ್ವಚ್ಛ ಸರ್ವೇಕ್ಷಣೆ–2024ರ ಅಂಗವಾಗಿ ಮನೆ, ಅಂಗಡಿಗಳಲ್ಲಿ ಹಸಿ ಕಸ ಮತ್ತು ಒಣ ಕಸ ವಿಂಗಡಿಸಿ ನೀಡುವ ಕಾರ್ಡ್‌ಗಳನ್ನು ರಾಜ್ಯದಲ್ಲಿಯೇ ಮೊದಲ ಬಾರಿಗೆ ವಿತರಿಸಲಾಗಿದ್ದು, ಮೂಲದಲ್ಲಿಯೇ ಕಸ ವಿಂಗಡಿಸಿ, ಸಂಗ್ರಹಿಸುವ ವಿನೂತನ ಪ್ರಯೋಗಕ್ಕೆ ನಗರಸಭೆ ಮುಂದಾಗಿದೆ.

ಪ್ರಾಯೋಗಿಕವಾಗಿ ನಾಲ್ಕು ತಿಂಗಳ ಅವಧಿಗೆ ಮುದ್ರಿಸಿ, ಏಪ್ರಿಲ್ ಮಾಹೆಯಲ್ಲಿ ವಾರ್ಡ್ ನಂ. 9 ರಿಂದ 17 ಒಟ್ಟು 9 ವಾರ್ಡ್‌ಗಳಲ್ಲಿ ಬರುವ ಎಲ್ಲಾ ಮನೆಗಳಿಗೂ ಹಂಚಲಾಗಿರುತ್ತದೆ. ಹಾಗೂ ಈ ಕುರಿತು ಪ್ರತಿನಿತ್ಯ ಪರಿಶೀಲನೆ ನಡೆಸಿದ್ದು, ಇದನ್ನು ಇತರೆ ವಾರ್ಡ್‌ಗಳಿಗೆ ಅನ್ವಯಿಸಿಲು ಯೋಚಿಸಿ, ಮೇ ಮಾಹೆಯಲ್ಲಿ ವಾರ್ಡ್ ನಂ.5, 6, 7, 24, 25, 26, 27 ಒಟ್ಟು 7




ವಾರ್ಡ್ ಮನೆಗಳಿಗೂ ಹಂಚಿ ಒಟ್ಟು 16 ವಾರ್ಡ್‌ಗಳಿಗೆ ನಾಲ್ಕು ತಿಂಗಳ ಕಾರ್ಡ್‌ನ್ನು ಹಂಚಲಾಗಿರುತ್ತದೆ. ಮುಂದುವರೆದು ಚಿತ್ರದುರ್ಗ ನಗರಸಭೆ ವ್ಯಾಪ್ತಿಯ 35 ವಾರ್ಡ್‌ಗಳಿಗೂ ಈ ಸೌಲಭ್ಯ ನೀಡಲು ಜುಲೈ ಮಾಹೆಯಲ್ಲಿ ಆರು ತಿಂಗಳ ಅವಧಿಗೆ ಅಂದರೆ 2024ರ ಡಿಸೆಂಬರ್ ಅಂತ್ಯದವರೆಗೆ ಕಾರ್ಡ್‌ಗಳನ್ನು ಉಳಿದ 19 ವಾರ್ಡ್‌ಗಳಿಗೆ ಅಂದರೆ ವಾರ್ಡ್ ನಂ.1, 2, 3, 4, 8, 18, 19, 20, 21, 22, 23, 28, 29, 30, 31, 32, 33, 34, 35 ವಾರ್ಡ್‌ಗಳ ಪ್ರತಿ ಮನೆಗೂ ಕಾರ್ಡ್‌ನ್ನು ವಿತರಣೆ ಮಾಡಲಾಗಿರುತ್ತದೆ.

ಸಾರ್ವಜನಿಕರು ಈ ಕಾರ್ಯಕ್ಕೆ ಸಹಕರಿಸಿ, ಪ್ರತಿನಿತ್ಯವೂ ಹಸಿ ಕಸ, ಒಣ ಕಸ ವಿಂಗಡಣೆ ಮಾಡಿ ನಗರಸಭೆಯ ವಾಹನಗಳಿಗೆ ನೀಡಿ, ತಮಗೆ ವಿತರಿಸಿರುವ ಕಾರ್ಡ್‌ಗಳಲ್ಲಿ ದಾಖಲಿಸಲು ಮನವಿ ಮಾಡಿದೆ. ಒಂದು ವೇಳೆ ನಗರಸಭೆಯ ವಾಹನ ಪ್ರತಿ ದಿನ ಅಥವಾ 2 ದಿನಕ್ಕೊಮ್ಮೆ ನಿರಂತರವಾಗಿ ಬರುತ್ತಿರುವ ಬಗ್ಗೆ ಸಹ ಈ ಕಾರ್ಡ್‌ನಲ್ಲಿ ಮನೆಯ ಮಾಲೀಕರ ಸಹಿ ಹಾಕುವುದರಿಂದ ತಿಳಿದುಬರುತ್ತದೆ. ಎರಡು–ಮೂರು ತಿಂಗಳ ಅವಧಿಯಲ್ಲಿ ಸಾರ್ವಜನಿಕರಿಗೆ ನಗರಸಭೆಯ ಸಿಬ್ಬಂದಿಗಳು ಹಾಗೂ ಆರೋಗ್ಯ ನಿರೀಕ್ಷಕರು ಅರಿವು ಮೂಡಿಸಲು ಸೂಚಿಸಲಾಗಿರುತ್ತದೆ. ಆ ನಂತರವೂ ಸಹ ಸಾರ್ವಜನಿಕರು ಕಸವನ್ನು ವಿಂಗಡಿಸಿ ನಗರಸಭೆಯ ವಾಹನಗಳಿಗೆ ನೀಡದೇ ಇದ್ದರೆ, ದಂಡ ವಿಧಿಸಲು ಚಿಂತಿಸಲಾಗಿರುತ್ತದೆ.

ಚಿತ್ರದುರ್ಗ ನಗರವು ಐತಿಹಾಸಿಕ ನಗರವಾಗಿದ್ದು, ನಗರ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾಪಾಡುವುದು ಎಲ್ಲರ ಹೊಣೆ. ಇದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ. ಪ್ರತಿ ದಿನ ಮನೆ, ಅಂಗಡಿಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ರಸ್ತೆಗೆ, ಚರಂಡಿಗೆ ಹಾಕದೇ ಹಸಿ ಕಸ, ಒಣ ಕಸವನ್ನಾಗಿ ಬೇರ್ಪಡಿಸಿ ನಗರಸಭೆಯ ವಾಹನ ಮನೆ ಬಾಗಿಲಿಗೆ ಬಂದಾಗ ನೀಡಲು ಪ್ರತಿ ನಿತ್ಯ ಕಸದ ವಾಹನಗಳಲ್ಲಿ ಪ್ರಚಾರ ಮಾಡಲಾಗುತ್ತಿದೆ. ಆದರೂ ಸಹ ಇನ್ನೂ ಪೂರ್ಣ ಪ್ರಮಾಣದಲ್ಲಿ ಹಸಿ ಕಸ, ಒಣ ಕಸ ವಿಂಗಡಿಸಿ, ನಗರಸಭೆಯ ವಾಹನಗಳಿಗೆ ನೀಡದೇ ರಸ್ತೆ, ಚರಂಡಿ ಮತ್ತು ಖಾಲಿ ನಿವೇಶನಗಳಲ್ಲಿ ಸಾರ್ವಜನಿಕರು ಎಸೆಯುತ್ತಿರುವುದು ಕಂಡುಬಂದಿರುತ್ತದೆ. ಹಸಿ ಕಸ, ಒಣ ಕಸವನ್ನಾಗಿ ವಿಂಗಡಿಸಿ, ನಗರಸಭೆಯ ವಾಹನಗಳಿಗೆ ನೀಡಿದರೆ, ಚಿತ್ರದುರ್ಗ ನಗರವನ್ನು ಸ್ವಚ್ಛ, ಸುಂದರ ನಗರವನ್ನಾಗಿ ಮಾಡಲು ನಗರಸಭೆಯೊಂದಿಗೆ ಸಹಕರಿಸಬೇಕು ಎಂದು ಚಿತ್ರದುರ್ಗ ನಗರಸಭೆ ಪೌರಾಯುಕ್ತರಾದ ಎಂ.ರೇಣುಕಾ ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

## ಫಾಸ್ಟ್ ನ್ಯೂಸ್

### ಪ್ರೋತ್ಸಾಹಧನಕ್ಕೆ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಅರ್ಜಿ

» ಚಿತ್ರದುರ್ಗ

2024–25ನೇ ಸಾಲಿನಲ್ಲಿ ಐಐಟಿ, ಐಐಐಟಿ, ಎನ್ಐಟಿ, ಐಐಎಂ, ಐಐಎಸ್ಇಆರ್, ಎಐಐಎಂಎಸ್, ಎನ್ಎಲ್ಯು, ಐಎನ್ಐ ಮತ್ತು ಐಯುಎಸ್ಎಲ್ಎ ಗಳಂತಹ ಮುಂತಾದವು ಸರ್ಕಾರದಿಂದ ಅನುಮತಿ ಪಡೆದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪ್ರವೇಶ ಪಡೆದಿರುವ ಅಲ್ಪಸಂಖ್ಯಾರ ಸಮುದಾಯದ ವಿದ್ಯಾರ್ಥಿಗಳಿಗೆ ಕೋರ್ಸ್‌ನ ಪೂರ್ಣ ಅವಧಿಯಲ್ಲಿ ಒಂದು ಬಾರಿಗೆ ಪ್ರೋತ್ಸಾಹಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆಯ ದಿನವಾಗಿದೆ. ಅರ್ಜಿ ಸಲ್ಲಿಸಲು ಅಲ್ಪಸಂಖ್ಯಾತರ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರೋತ್ಸಾಹಧನ ಯೋಜನೆ ಪ್ರಯೋಜನೆ ಪಡೆಯಲು ಸೇವಸಿಂಧು ಪೋರ್ಟಲ್ https://sevasindhu.karnataka.gov.in/sevsidhu/departmentservices ನ ಮೂಲಕ ಅರ್ಜಿ ಸಲ್ಲಿಸಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ಸೂಚಿಸಿದ್ದಾರೆ.

### ವಿದ್ಯಾರ್ಥಿನಿಲಯ ಮತ್ತು ಆಶ್ರಮ ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

» ಚಿತ್ರದುರ್ಗ

2024–25ನೇ ಶೈಕ್ಷಣಿಕ ಸಾಲಿಗೆ ಹೊಳಲ್ಕೆರೆ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಮತ್ತು ಪ.ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಡಾ. ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ಪೂರ್ವ ಹಾಗೂ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಹಾಗೂ ಆಶ್ರಮ ಶಾಲೆಯ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.5 ರಿಂದ 10ನೇ ತರಗತಿ ಮತ್ತು ಮೆಟ್ರಿಕ್ ನಂತರದ ಬಾಲಕ, ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಪಿಯುಸಿ, ಪದವಿ ವೃತ್ತಿಪರ ವಿಷಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಪ್ರವೇಶಾವಕಾಶವಿದೆ. ಅರ್ಹ ಅಭ್ಯರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ https://sw.kar.nic.in ನಲ್ಲಿ ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಿಲಯ ಮೇಲ್ವಿಚಾರಕರು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದು ಎಂದು ಹೊಳಲ್ಕೆರೆ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು (ಗ್ರೇಡ್–2) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಉದ್ಯಮಶೀಲತಾ ತಿಳುವಳಿಕೆ ತರಬೇತಿ

» ಚಿತ್ರದುರ್ಗ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಪ್ರಯೋಜಕತ್ವದಲ್ಲಿ ಸಿಡಾಕ್ (ಕರ್ನಾಟಕ ಉದಯಮಶೀಲತಾಭಿವೃದ್ಧಿ ಕೇಂದ್ರ ಧಾರವಾಡ) ಸಂಸ್ಥೆಯಿಂದ ಸ್ವಯಂ ಉದ್ಯೋಗ ಕೈಗೊಳ್ಳಲು ಇಚ್ಛಿಸುವ ಚಿತ್ರದುರ್ಗ ಜಿಲ್ಲೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಹಿಳಾ ಅಭ್ಯರ್ಥಿಗಳಿಗೆ ಒಂದು ದಿನದ "ಉದ್ಯಮಶೀಲತಾ ತಿಳುವಳಿಕೆ ತರಬೇತಿ ಶಿಬಿರ"ವನ್ನು ಜುಲೈ ತಿಂಗಳ ಕೊನೆಯ ವಾರದಲ್ಲಿ ಚಿತ್ರದುರ್ಗದಲ್ಲಿ ಸಂಘಟಿಸಲು ಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಸ್ವಂತ ಉದ್ಯಮ ಸ್ಥಾಪಿಸ ಬಯಸುವ ಆಸಕ್ತರಿಗೆ ಪ್ರೇರಣೆ, ಸ್ವಂತ ಉದ್ಯಮ ಸ್ಥಾಪನೆಗಾಗಿ ಸರ್ಕಾರ ಹಾಗೂ ಹಣಕಾಸು ಸಂಸ್ಥೆಗಳಿಂದ ದೊರೆಯುವ ನೆರವು, ಪ್ರೋತ್ಸಾಹ ಮುಂದೆ ಕೈಗೊಳ್ಳಲಾಗುವ ಉದ್ಯಮಶೀಲತಾಭಿವೃದ್ಧಿ ತರಬೇತಿ ಇತ್ಯಾದಿಗಳ ಕುರಿತು ಮಾಹಿತಿಯನ್ನು ನೀಡಲಾಗುವುದು. ಆಸಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಯೋಜನ ಪಡೆಯಬಹುದು. ಭಾಗವಹಿಸುವವರು ಕನಿಷ್ಠ 18 ವರ್ಷ ಮೇಲ್ಪಟ್ಟ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಹಿಳೆಯರಾಗಿರಬೇಕು ಹಾಗೂ ಓದಲು, ಬರೆಯಲು ಬರಬೇಕು. ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು 2 ಪಾಸ್‌ಪೋರ್ಟ್ ಅಳತೆಯ ಫೋಟೋ ಹಾಗೂ ಆಧಾರ್ ಕಾರ್ಡ್‌ನ ಪ್ರತಿಯೊಂದಿಗೆ ಸಂಪರ್ಕಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರಕರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಮಾಹಿತಿಗಾಗಿ ಸಿಡಾಕ್ ತರಬೇತುದಾರ ಪಿ.ವಿಜಯ್ ಕುಮಾರ್ ಮೊಬೈಲ್ ನಂಬರ್ 7760270058 ಗೆ ಸಂಪರ್ಕಿಸಬಹುದು ಎಂದು ದಾವಣಗೆರೆ ಸಿಡಾಕ್ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

### 5 ರಂದು ಹರಿಹರಕ್ಕೆ ರಥಯಾತ್ರೆ ಆಗಮನ

■ ದಾವಣಗೆರೆ

ಕರ್ನಾಟಕ ಸಂಭ್ರಮ–50ರ ಅಂಗವಾಗಿ ಕರ್ನಾಟಕ ಜ್ಯೋತಿ ರಥಯಾತ್ರೆಯು ರಾಜ್ಯಾದ್ಯಂತ ಸಂಚರಿಸುತ್ತಿದೆ, ಜುಲೈ 5 ರಂದು 9 ಗಂಟೆಗೆ ರಾಣೆಬೆನ್ನೂರು ತಾಲ್ಲೂಕಿನಿಂದ ಹರಿಹರಕ್ಕೆ ಆಗಮಿಸಲಿದೆ. ಮಧ್ಯಾಹ್ನ 3 ಗಂಟೆಗೆ ಜಗಳೂರಿಗೆ ತೆರಳಿದೆ. ಜುಲೈ 6 ರಂದು ಬೆಳಿಗ್ಗೆ 9 ಗಂಟೆಗೆ ಜಗಳೂರಿನಿಂದ ದಾವಣಗೆರೆಗೆ ಆಗಮಿಸಲಿದೆ.

### ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಕರ್ಯಕ್ಕೆ ಆದ್ಯತೆ ನೀಡಿ–ಜಿಲ್ಲಾಧಿಕಾರಿ ಟಿ.ವೆಂಕಟೇಶ್

# ಐತಿಹಾಸಿಕ ಕೋಟೆಗೆ ಧ್ವನಿ ಬೆಳಕಿನ ವೈಭವ

» ಚಿತ್ರದುರ್ಗ



ಕೆ.ಎಂ.ಇ.ಆರ್.ಸಿ (ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ)ಯ ಸಿ.ಇ.ಪಿ.ಎಂ.ಐ.ಝಡ್ (ಗಣಿಬಾಧಿತ ವಲಯದ ಸಮಗ್ರ ಪರಿಸರ ಅಭಿವೃದ್ಧಿ ಯೋಜನೆ) ಯೋಜನೆಯಡಿ ನಗರದ ಐತಿಹಾಸಿಕ ಕೋಟೆ ಹಾಗೂ ಚಂದ್ರವಳ್ಳಿ ಪ್ರದೇಶದಲ್ಲಿ ಒಟ್ಟು ರೂ.28.40 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾವನೆ ಸಿದ್ದಪಡಿಸಲಾಗಿದೆ.

ಮುಖ್ಯವಾಗಿ ರೂ.11.50 ಕೋಟಿ ವೆಚ್ಚದಲ್ಲಿ ಐತಿಹಾಸಿಕ ಕೋಟೆಯ ನಾಲ್ಕು ಪ್ರಮುಖ ಸ್ಥಳಗಳಲ್ಲಿ ಧ್ವನಿ ಬೆಳಕು ವ್ಯವಸ್ಥೆಯನ್ನು ಅಳವಡಿಸಲಾಗುವುದು. ಈ ಯೋಜನೆ ಅನುಷ್ಠಾನಕ್ಕೆ ಭಾರತೀಯ ಪುರಾತತ್ವಇಲಾಖೆಅನುಮತಿಯನ್ನುಶೀಘ್ರ ಪಡೆದುಕೊಳ್ಳುವಂತೆ ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಜರುಗಿದ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.ಜಿಲ್ಲೆಯ ಪ್ರಮುಖ ಪ್ರವಾಸಿ ತಾಣವಾಗಿರುವ ಕೋಟೆಗೆ ಪ್ರತಿ ತಿಂಗಳು 35 ಸಾವಿರ ಪ್ರವಾಸಿಗರು ಭೇಟಿ ನೀಡುತ್ತಾರೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಕೋಟೆಯನ್ನು ಅಭಿವೃದ್ಧಿ ಪಡಿಸಲು ಯೋಜನೆ ರೂಪಿಸಲಾಗಿದೆ. ಇದರ ಅಡಿ, ರೂ.75 ಲಕ್ಷದಲ್ಲಿ ಮಕ್ಕಳ ಉದ್ಯಾನವನ, ರೂ.1 ಕೋಟಿ ವೆಚ್ಚದಲ್ಲಿ ಅಕ್ಕ ತಂಗಿಯರ ಹೊಂಡದ ಬಳಿ ನೀರಿನ ಕಾರಂಜಿಗಳನ್ನು ನಿರ್ಮಿಸಲಾಗುವುದು. ಇದರ ಜೊತೆಗೆ ಕೋಟೆಯ ಒನಕೆ ಓಬವ್ವ ಕಿಂಡಿಯ ಬಳಿಯ ಹನುಮಾನ ದ್ವಾರದಿಂದ ಚಂದ್ರವಳ್ಳಿ ತೋಟಕ್ಕೆ ತೆರಳಲು 3 ಮೀಟರ್ ಅಗಲದ ಹಾಗೂ 1.5 ಕಿ.ಮೀ ಉದ್ದದ ನೂತನ ಕಾಲುದಾರಿ ಮಾಡಲಾಗುವುದು.

ಚಂದ್ರವಳ್ಳಿ ಕೆರೆಯ ಸುತ್ತ ರೂ.3.75 ಕೋಟಿ ವೆಚ್ಚದಲ್ಲಿ ವಾಕಿಂಗ್ ಟ್ರಾಕ್, ಬೀದಿ ದೀಪಗಳನ್ನು ಅಳವಡಿಸಲಾಗುವುದು. ರೂ.15 ಲಕ್ಷದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ, ರೂ.75 ಲಕ್ಷದಲ್ಲಿ ವಾಹನ ನಿಲುಗಡೆ, ರೂ.1 ಕೋಟಿ ವೆಚ್ಚದಲ್ಲಿ ಚಂದ್ರವಳ್ಳಿ ಗುಹೆಗೆ ವಿದ್ಯುತ್ ದೀಪಗಳ ಅಳವಡಿಕೆ, ರೂ.6 ಕೋಟಿ ವೆಚ್ಚದಲ್ಲಿ ಮಕ್ಕಳ ಆಟಿಕೆ ಟ್ರೈನ್, ರೂ.1.25 ಕೋಟಿ ವೆಚ್ಚದಲ್ಲಿ ಚಂದ್ರವಳ್ಳಿ ಸಂಪರ್ಕಿಸುವ ರಸ್ತೆ ಬೀದಿ ದೀಪ ಅಳವಡಿಸಲಾಗುವುದು. ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ಶೀಘ್ರವೇ ಪುರಾತತ್ವ ಇಲಾಖೆಯಿಂದ ಕಾಮಗಾರಿಗಳನ್ನು ಕೈಗೊಳ್ಳಲು ಅನುಮತಿ ಪಡೆದುಕೊಳ್ಳುವಂತೆ ಹೇಳಿದರು.

ಕೆ.ಎಂ.ಇ.ಆರ್.ಸಿ ಅನುದಾನದ ಅಡಿಯಲ್ಲಿಯೇ ಹೊಸದುರ್ಗ ತಾಲ್ಲೂಕಿನ ಹಾಲು ರಾಮೇಶ್ವರದಲ್ಲಿ ಧರ್ಮಛತ್ರ, ಪಾರ್ಕಿಂಗ್, ಸಾರ್ವಜನಿಕ ಶೌಚಾಲಯ, ಹೈಮಾಸ್ಟ್ ದೀಪಗಳನ್ನು ಅಳವಡಿಸಲಾಗುವುದು. ಹೊಳಲ್ಕೆರೆ ತಾಲ್ಲೂಕಿನ ದೊಡ್ಡಹೊಟ್ಟೆ ರಂಗನಾಥ ಸ್ವಾಮಿ ಬೆಟ್ಟಕ್ಕೆ ಮೆಟ್ಟಿಲುಗಳ ನಿರ್ಮಾಣ, ಬೆಟ್ಟದಲ್ಲಿ ಕಲ್ಯಾಣಿಯ ಪುನರುಜ್ಜೀವನ, ಧರ್ಮಛತ್ರ, ಪಾರ್ಕಿಂಗ್, ಸಾರ್ವಜನಿಕ ಶೌಚಾಲಯ, ಹೈಮಾಸ್ಟ್ ದೀಪಗಳನ್ನು ಅಳವಡಿಸಲಾಗುವುದು.ವಿ.ವಿ.ಸಾಗರ ಜಲಾಶಯದ ಹಿನ್ನೀರಿನಲ್ಲಿ ಸಾಹಸಮಯ ಜಲಕ್ರೀಡೆ ಆರಂಭಿಸಲು ಸಹ ಯೋಜನೆ ರೂಪಿಸಲಾಗಿದೆ. ಒಂದು ಜಿಲ್ಲೆ ಒಂದು ತಾಣ ಯೋಜನೆಯಡಿ ವಾಣಿ ವಿಲಾಸ ಸಾಗರವನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸಲು ಯೋಜನೆ ರೂಪಿಸಿ, ಇದರೊಂದಿಗೆ ಚಂದ್ರವಳ್ಳಿ ಕೆರೆಯಲ್ಲಿ ಜಲಕ್ರೀಡೆ ಹಾಗೂ ದೋಣಿ ವಿಹಾರಕ್ಕೂ ಯೋಜನೆ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಕಾಯ್ದೆ 2015 ಅಡಿ ಜಿಲ್ಲೆಯ ಪ್ರಮುಖ ಹೋಟೆಲ್‌ಗಳ ನೊಂದಣಿ ಕಡ್ಡಾಯವಾಗಿ ಮಾಡಬೇಕು. ಇದರಿಂದ ಜಿಲ್ಲೆಗೆ ಭೇಟಿ ನೀಡಿದ ಹೊರ ದೇಶ ಹಾಗೂ ಹೊರ ರಾಜ್ಯದ ಪ್ರವಾಸಿಗರ ಮಾಹಿತಿ ಲಭ್ಯವಾಗುತ್ತಿದೆ. ಜಿಲ್ಲೆಯ ಎಲ್ಲಾ ಪ್ರವಾಸಿ ತಾಣಗಳಲ್ಲಿಯೂ ಮೂಲಭೂತ ಸೌಕರ್ಯ ಕಲ್ಪಿಸುವಂತೆ ನಿರ್ದೇಶನ ನೀಡಿದರು.ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಳ್ಳುತ್ತಿರುವ ಕಾಮಗಾರಿಗಳನ್ನು ಶೀಘ್ರವೇ ಪೂರ್ಣಗೊಳಿಸಬೇಕು. ಯಾತ್ರಿ ನಿವಾಸಗಳು ಸಾರ್ವಜನಿಕರ ಬಳಕೆ ಒದಗುವಂತಾಗಬೇಕು.ಪ್ರಮುಖಧಾರ್ಮಿಕ ಕ್ಷೇತ್ರಗಳಲ್ಲಿ ನಿರ್ಮಿಸಿರುವ ಯಾತ್ರಿ ನಿವಾಸಗಳನ್ನು ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಿ, ನಿರ್ವಹಣೆ ಜವಬ್ದಾರಿ ವಹಿಸುವಂತೆ ಹೇಳಿದರು.ಜಿಲ್ಲೆಯ ಪ್ರವಾಸಿ ತಾಣಗಳ ಕುರಿತು ಕಿರುಹೊತ್ತಿಗೆ ಮುದ್ರಿಸಬೇಕು. ಇದರಲ್ಲಿ ಕೇಂದ್ರ, ರಾಜ್ಯ ಹಾಗೂ ಪ್ರವಾಸೊದ್ಯಮ ಇಲಾಖೆಯಿಂದ ನಿರ್ವಹಿಸುತ್ತಿರುವ ಪ್ರವಾಸಿ ತಾಣಗಳ ಸಂಪೂರ್ಣ ಮಾಹಿತಿ ಇರಬೇಕು ಎಂದರು.ಸಭೆಯಲ್ಲಿ ಜಿ.ಪಂ ಸಿಇಓ ಎಸ್.ಜೆ.ಸೋಮಶೇಖರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜೆ.ಕುಮಾರಸ್ವಾಮಿ, ತಹಶೀಲ್ದಾರರುಗಳಾದ ಡಾ.ನಾಗವೇಣಿ, ಪಾತೀಮ ಬಿಬಿ, ತಿರುಪತಿ ಪಾಟೀಲ್, ಲೋಕೋಪಯೋಗಿ ಕಾರ್ಯಪಾಲಕ ಅಭಿಯಂತರಮಲ್ಲಿಕಾರ್ಜುನ್,ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಶಶಿಕುಮಾರ್ ಉಪಸ್ಥಿತರಿದ್ದರು.

## ಮುಂಗಾರಿನಲ್ಲಿ 30 ಕೆರೆಗಳಿಗೆ ನೀರು: ಡಿಸಿ

» ದಾವಣಗೆರೆ



ತುಂಗಭದ್ರಾ ನದಿಯಿಂದ ಜಗಳೂರು ತಾಲ್ಲೂಕಿನ 47 ಹಾಗೂ ಹರಪನಹಳ್ಳಿ ತಾಲ್ಲೂಕಿನ 6 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಮುಕ್ತಾಯ ಹಂತದಲ್ಲಿದ್ದು ಮುಂಗಾರಿನಲ್ಲಿ 30 ಕೆರೆಗಳಿಗೆ ನೀರು ತುಂಬಿಸಲು ಪ್ರಾಯೋಗಿಕ ಹರಿವು ಆರಂಭಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ತುಂಗಭದ್ರಾ ನದಿಗೆ ದೀಟೂರು ಬಳಿ ನಿರ್ಮಿಸಿರುವ ಪಂಪ್ ಹೌಸ್ ಮತ್ತು ಜಗಳೂರು ತಾಲ್ಲೂಕಿನ ತುಪ್ಪದಳ್ಳಿ ಕೆರೆಗೆ ನೀರು ತುಂಬಿಸುವ ಯೋಜನೆ ವೀಕ್ಷಣೆ ಮಾಡಿ ಮಾತನಾಡಿದರು.

ಜಗಳೂರು ತಾಲ್ಲೂಕಿನ ಕೆರೆ ತುಂಬಿಸುವ ಏತ ನೀರಾವರಿ ಯೋಜನೆಯನ್ನು ರೂ. 660.34 ಕೋಟಿಯಲ್ಲಿ ಕೈಗೊಂಡು 2019 ರ ಡಿಸೆಂಬರ್ 9 ರಿಂದ ಕಾಮಗಾರಿ ಆರಂಭಿಸಲಾಗಿದೆ. ಯೋಜನೆಯಡಿ 1.379 ಟಿಎಂಸಿ ನೀರು ಮಳೆಗಾಲದಲ್ಲಿ ಬಳಕೆ ಮಾಡಿಕೊಂಡು ಕೆರೆಗಳನ್ನು ಭರ್ತಿ ಮಾಡಲಾಗುತ್ತದೆ.

ಈ ಯೋಜನೆಯಿಂದ 65 ಗ್ರಾಮಗಳಿಗೆ ಅನುಕೂಲವಾಗಲಿದ್ದು 1 ಲಕ್ಷ ರೈತರಿಗಿಂತ ಹೆಚ್ಚು ಜನರಿಗೆ ಉಪಯೋಗವಾಗುವ ಜೊತೆಗೆ ತಾಲ್ಲೂಕಿನ ಅಂತರ್ಜಲ ಮಟ್ಟ ಹೆಚ್ಚಾಗಿ ನೀರಿನ ಸಮಸ್ಯೆ ನಿವಾರಣೆಯಾಗಲಿದೆ.

ಯೋಜನೆಯಡಿ 220.68 ಕಿ.ಮೀ ಮುಖ್ಯ ಪೈಪ್ ಲೈನ್ ಉದ್ದ ಇರಲಿದೆ. ಎಂ.ಎಸ್ ಪೈಪ್ 142.62 ಕಿ.ಮೀ ಇದ್ದು 115 ಕಿ.ಮೀ ಅಳವಡಿಸಲಾಗಿದೆ. ಜಾಕ್ ವೆಲ್ ಮತ್ತು ಪಂಪ್ ಹೌಸ್ ಕಾಮಗಾರಿ ಮುಗಿದಿರುವುದರಿಂದ ಈಗಾಗಲೇ ನೀರೆತ್ತುವ ಪ್ರಾಯೋಗಿಕ ಕಾರ್ಯ ಆರಂಭಿಸಲಾಗಿದ್ದು ಪ್ರಸಕ್ತ ಮುಂಗಾರಿನಲ್ಲಿ 30 ಕೆರೆಗಳಿಗೆ ನೀರು ಪಂಪ್ ಮಾಡಿ ಭರ್ತಿ ಮಾಡಲಾಗುತ್ತದೆ ಎಂದರು.ವೀಕ್ಷಣೆಯಲ್ಲಿ ನೀರಾವರಿ ನಿಗಮದ ಕಾರ್ಯಪಾಲಕ ಇಂಜಿನಿಯರ್ ಮಂಜುನಾಥ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಪರಿಸರ ನಮ್ಮೆಲ್ಲರ ರಕ್ಷಾ ಕವಚ: ಟಿ.ರಘುಮೂರ್ತಿ



» ಚಳ್ಳಕೆರೆ

ಪ್ರತಿಯೊಬ್ಬ ವ್ಯಕ್ತಿಯೂ ಪರಿಸರ ಪ್ರೇಮಿಯಾಗಿ ರೂಪಗೊಳ್ಳಬೇಕು, ಪರಿಸರದಿಂದ ಮಾತ್ರ ನಮ್ಮ ಬದುಕು ಎಂಬುವುದು ಅರಿತುಕೊಳ್ಳಿ ಎಂದು ಶಾಸಕ, ಕರ್ನಾಟಕ ರಾಜ್ಯ ಸಣ್ಣಕೈಗಾರಿಕೆಗಳ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿ ತಿಳಿಸಿದರು.

ನಗರದ ಮೊರಾರ್ಜಿ ದೇಸಾಯಿ ವಸತಿಶಾಲೆಯ ತ.ರಾ.ಸು ರಂಗಮಂದಿರದಲ್ಲಿ ಅರಣ್ಯ ಇಲಾಖೆ ಮತ್ತು ಶಿಕ್ಷಣ ಇಲಾಖೆ ಸಹಯೋಗದಲ್ಲಿ ನಡೆದ ವನಮಹೋತ್ಸವ ಕಾರ್ಯಕ್ರಮದಲ್ಲಿ ಸಸಿ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ನೈಸರ್ಗಿಕ ಸಂಪತ್ತಿನಿಂದ ನಾವು ಆರೋಗ್ಯವೂ ಸೇರಿದಂತೆ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ. ಉತ್ತಮ ವಾತಾವರಣವಿದ್ದಲ್ಲಿ ಮಾತ್ರ ನಾವು ಸಂತೃಪ್ತಿಯಿಂದ ಬದುಕಲು ಸಾಧ್ಯ. ಕಳೆದ ಹಲವಾರು ವರ್ಷಗಳಿಂದ ಅರಣ್ಯ ಇಲಾಖೆ ಪ್ರತಿವರ್ಷವೂ ಹೆಚ್ಚು, ಹೆಚ್ಚು ಗಿಡ ನೆಡುವ ಕಾರ್ಯವನ್ನು ಮಾಡುತ್ತಾ ಬಂದಿದೆ. ಈ ಬಾರಿ ಮೊರಾರ್ಜಿ ಶಾಲಾ ಆವರಣದಲ್ಲಿ ವನಮನೋತ್ಸವದ ಮೂಲಕ ನೂರಾರು ಗಿಡಗಳನ್ನು ನೆಡುವ ಯೋಜನೆ ಇಂದು ಚಾಲನೆ ನೀಡಲಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಪರಿಸರ ಪ್ರೇಮಿಯಾಗಿ ರೂಪಗೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಮೊರಾರ್ಜಿ ಶಾಲೆಯ ಪ್ರಾಂಶುಪಾಲ, ಶಿಕ್ಷಕರು, ಸಿಬ್ಬಂದಿ ವರ್ಗ, ಇಒ ಶಶಿಧರ, ಡಿವೈಎಸ್ಪಿ ರಾಜಣ್ಣ, ನಗರಸಭಾ ಸದಸ್ಯರಾದ ಸುಮಾ, ಕವಿತಾ, ಎಂ.ಜೆ.ರಾಘವೇಂದ್ರ, ಬಿ.ಟಿ.ರಮೇಶ್‌ಗೌಡ, ಕೆ.ವೀರಭದ್ರಪ್ಪ, ನಾಮಿನಿ ಸದಸ್ಯರಾದ ಅನ್ವರ್‌ಮಾಸ್ಟರ್, ನೇತಾಜಿಪ್ರಸನ್ನ, ಬಡಗಿಪಾಪಣ್ಣ, ಭದ್ರಿ, ನಟರಾಜ್, ಮುಖಂಡರಾದ ಆರ್.ಪ್ರಸನ್ನಕುಮಾರ್, ಅಪ್ಪಣ್ಣ, ಎಂ.ಚೇತನ್‌ಕುಮಾರ್ ಮುಂತಾದವರು ಉಪಸ್ಥಿತರಿದ್ದರು.

## ಕನ್ನಡ ಸಾಹಿತ್ಯ ಪರಿಷತ್‌ನಿಂದ ಪ್ರತಿಭಾ ಪುರಸ್ಕಾರ

» ಚಳ್ಳಕೆರೆ



ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಮತ್ತೊಮ್ಮೆ ತನ್ನ ಕಾರ್ಯಚಟುವಟಿಕೆಯನ್ನು ಆರಂಭಿಸಿದ್ದು ಲೋಕಸಭೆ ಮತ್ತು ವಿಧಾನಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಪರಿಷತ್‌ನ ಕಾರ್ಯಕ್ರಮಗಳಿಗೆ ತಾತ್ಕಾಲಿಕ ವಿದಾಯ ಹೇಳಿತ್ತು. ಮತ್ತೊಮ್ಮೆ ಕನ್ನಡ ಸಾಹಿತ್ಯ ಪರಿಷತ್ ತನ್ನಚಟುವಟಿಕೆಯನ್ನು ಪ್ರತಿಭಾಪುರಸ್ಕಾರ ಮತ್ತು ಕವಿಗೋಷ್ಠಿ ಮೂಲಕ ಆರಂಭಿಸಲಿದೆ ಎಂದು ಕನ್ನಡ ಸಾಹಿತ್ಯಪರಿಷತ್ ತಾಲ್ಲೂಕು ಅಧ್ಯಕ್ಷ ಜಿ.ಟಿ.ವೀರಭದ್ರಸ್ವಾಮಿ ತಿಳಿಸಿದರು.

ಅವರು, ನಗರದ ಪ್ರವಾಸಿಮಂದಿರದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ನಗರದ ಗಾಯಿತ್ರಿಕಲ್ಯಾಣ ಮಂಟಪದಲ್ಲಿ ಜುಲೈ–7ರ ಭಾನುವಾರ ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮವನ್ನು ಶಾಸಕ ಟಿ.ರಘುಮೂರ್ತಿ ಉದ್ಘಾಟಿಸುವರು. ಪಿಯುಸಿಯಲ್ಲಿ ಶೇ.95 ಹೆಚ್ಚು, ಎಸ್ಎಸ್ಎಲ್‌ಸಿಯಲ್ಲಿ 125ಕ್ಕೆ125 ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅಭಿನಂದಿಸಲಾಗುವುದು.

ಚಳ್ಳಕೆರೆ ಮೂಲದ ನಾಡಿನ ಖ್ಯಾತಲೇಖಕಿ ಕಮಲಹಂಪನಾಯಕ ನಿಧನರಾದ ಹಿನ್ನೆಲೆಯಲ್ಲಿ ಅವರ ಸ್ಮರಣಾರ್ಥ ನನ್ನ ಬದುಕು, ನನ್ನ ಬವಣೆ ಎಂಬ ಶೀರ್ಷಿಕೆಯಡಿ ಕವಿಗೋಷ್ಠಿಯನ್ನು ಸಹ ಹಮ್ಮಿಕೊಳ್ಳಲಾಗಿದೆ. ಎರಡೂ ಕಾರ್ಯಕ್ರಮಗಳಿಗೆ ಜುಲೈ 6ರ ಶನಿವಾರ ಸಂಜೆಯೊಳಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಜಿ.ಟಿ.ವೀರಭದ್ರಸ್ವಾಮಿ ಅಧ್ಯಕ್ಷರು– 80503 11363, ಡಾ.ಕೆ.ಚಿತ್ತಯ್ಯ–94485 67118, ಮಂಜುನಾಥ 78929 95675ಗೆ ಸಂಪರ್ಕಿಸಿ,

## ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ

» ಚಿತ್ರದುರ್ಗ

2024–25ನೇ ಶೈಕ್ಷಣಿಕ ಸಾಲಿಗೆ ಮೊಳಕಾಲ್ಮೂರು ತಾಲ್ಲೂಕು ವ್ಯಾಪ್ತಿಯ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆಯುತ್ತಿರುವ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಮೊಳಕಾಲ್ಮುರು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ (ಗ್ರೇಡ್–2) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಪ್ರಮುಖ ಸುದ್ದಿ**

# ಮಣ್ಣು ಮಿಶ್ರಿತ ಕಬ್ಬಿಣದ ಅದಿರು ಸಾಗಾಟ: ಮೂವರ ಬಂಧನ

» ಹೊಸದುರ್ಗ



ತಾಲ್ಲೂಕಿನ ನಿಷೇಧಿತ ಪ್ರದೇಶದಲ್ಲಿ ನಡೆಯುತ್ತಿದ್ದ ಅಕ್ರಮ ಗಣಿಗಾರಿಕೆಯ ಮೇಲೆ ಬುಧವಾರ ಬೆಳಗಿನ ಜಾವ 1.30ರ ವೇಳೆಗೆ ದಾಳಿ ನಡೆಸಿದ ಅರಣ್ಯ ಇಲಾಖೆಯ ಅಧಿಕಾರಿಗಳು 4 ಲಾರಿಗಳನ್ನು ಮತ್ತು 1 ಜೆಸಿಬಿ ಹಾಗೂ 3 ಜನ ಚಾಲಕರನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಚಿತ್ರದುರ್ಗ ತಾಲ್ಲೂಕಿನ ಹೊರಪೇಟೆ ನಿವಾಸಿ ಮಹಮದ್ ತನ್ವೀರ್, ಮೊಳಕಾಲ್ಮೂರು ತಾಲೂಕಿನ ಬಿಜಿಕೆರೆ ಗ್ರಾಮದ ಸಮೀವುಲ್ಲಾ, ದಾವಣಗೆರೆ ನಗರದ ಮುಜಾಮಿಲ್ಲಾ ಬಂಧಿತ ಆರೋಪಿಗಳು.ತಾಲ್ಲೂಕಿನ ಮಾಡದಕೆರೆ ಸಮೀಪದಲ್ಲಿರುವ ಸರ್ವೆ ನಂಬರ್ 88ರ ಮಾರಿ ಮಸ್ಕ್ ಗುಡ್ಡದಲ್ಲಿ ಅನಧಿಕೃತವಾಗಿ ಗಣಿಗಾರಿಕೆ ಮಾಡುತ್ತಿರುವಾಗ, ಸ್ಥಳಕ್ಕೆ ಇಲ್ಲಿನ ವಲಯ ಅರಣ್ಯಾಧಿಕಾರಿ ಸುನೀಲ್ ಕುಮಾರ್ ಅವರ ನೇತೃತ್ವದಲ್ಲಿ ದಾಳಿ ನಡೆಸಿದಾಗ ಅಕ್ರಮ ಕಲ್ಲು ಗಣಿಗಾರಿಕೆ ನಡೆಸುತ್ತಿದ್ದವರು ಸಿಕ್ಕಿಬಿದ್ದಿದ್ದಾರೆ. ಇನ್ನೂ ಕೆಲವರು ಯಂತ್ರಗಳನ್ನು ಬಿಟ್ಟು ಪರಾರಿಯಾಗಿದ್ದಾರೆ.

ಅಧಿಕಾರಿಗಳು ಮತ್ತು ಸಿಬ್ಬಂದಿಗಳು 35 ಟನ್ ಅದಿರು, 4 ಲಾರಿ, 1 ಜೆಸಿಬಿಯನ್ನು ವಶಪಡಿಸಿಕೊಂಡಿದ್ದಾರೆ. ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ಜಿಲ್ಲಾ ಅಧಿಕಾರಿಗಳ ಸೂಚನೆ ಮೇರೆಗೆ ವಲಯ ಅರಣ್ಯಾಧಿಕಾರಿ ಸುನೀಲ್ ಅವರು ಕಟ್ಟುನಿಟ್ಟಿನ ಕ್ರಮ ವಹಿಸಿದ್ದರು. ಗಣಿಗಾರಿಕೆ ಪ್ರದೇಶಗಳ ಸುತ್ತ ಅಕ್ರಮ ಚಟುವಟಿಕೆ ನಡೆಯದಂತೆ ಕ್ರಮ ಕೈಗೊಂಡಿದ್ದರು. ಆದರೆ, ಎಲ್ಲರ ಕಣ್ತಪ್ಪಿಸಿ ಅಕ್ರಮ ಗಣಿಗಾರಿಕೆ ಮಾಡಲಾಗುತ್ತಿತ್ತು ಎನ್ನಲಾಗಿದೆ. ಈ ಬಗ್ಗೆ ವಲಯ ಅರಣ್ಯಾಧಿಕಾರಿ ಸುನೀಲ್ ಕುಮಾರ್ ಮಾತನಾಡಿ,ಮಾಡದಕೆರೆ ಅರಣ್ಯ ಪ್ರದೇಶದಲ್ಲಿ ಪ್ರತಿನಿತ್ಯ ಮಣ್ಣು ಸಾಗಾಟ ಆಗುತ್ತಿತ್ತು ಎಂಬ ಶಂಕೆ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ಪ್ರತಿನಿತ್ಯ ರಾತ್ರಿ ನಮ್ಮ ಅಧಿಕಾರಿಗಳು ಗಸ್ತು ತಿರುಗುತ್ತಿದ್ದವು. ಇದೇ ವೇಳೆ ಸರ್ವೆ ನಂಬರ್ 88ರಲ್ಲಿ ಮಣ್ಣು ತುಂಬುತ್ತಿರುವುದನ್ನು ಕಂಡುಬಂತು. ತಕ್ಷಣ ದಾಳಿ ನಡೆಸಿ ವಾಹನಗಳನ್ನು ಮತ್ತು ಚಾಲಕರನ್ನು ವಶಪಡಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು ಎಂದರು. ದಾಳಿ ಕಾರ್ಯಚರಣೆಯಲ್ಲಿ ಆರ್ ಎ□□□ ಸುನಿಲ್ ಕುಮಾರ್, ಡಿಆರ್ ಎ□□□ ಪ್ರಸನ್ನ, ಈಶ್ವರ್ ನಾಯ್ಕ, ಯೋಗೀಶ್ ಮತ್ತು ಸಿಬ್ಬಂದಿಗಳು ಇದ್ದರೆಂದು ಮಾಹಿತಿ ತಿಳಿದು ಬಂದಿದೆ.

## ಫಾಸ್ಟ್ ನ್ಯೂಸ್

### ಗ್ರಾಮ ಸಹಾಯಕ ಹುದ್ದೆಗೆ ಅರ್ಜಿ ಆಹ್ವಾನ

» ದಾವಣಗೆರೆ

ದಾವಣಗೆರೆ ತಾಲ್ಲೂಕು ಮಾಯಕೊಂಡ ಹೋಬಳಿಯ ಬಾಡ ವೃತ್ತದ ಗ್ರಾಮ ಸಹಾಯಕರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿದಾರರು ಓದಲು ಹಾಗೂ ಬರೆಯಲು ಚೆನ್ನಾಗಿ ಬಲ್ಲವರಾಗಿರಬೇಕು ,ಅರ್ಜಿದಾರರು ಖಾಲಿ ಇರುವ ಗ್ರಾಮಸಹಾಯಕ ಹುದ್ದೆಯ ವೃತ್ತದ ನಿವಾಸಿಯಾಗಿರಬೇಕು ಮತ್ತು ಕೇಂದ್ರಸ್ಥಾನದಲ್ಲಿಯೇ ವಾಸವಾಗಿರಬೇಕು. ಗ್ರಾಮಸಹಾಯಕ ತಳವಾರರು, ತೋಟಿಗಳು, ನೀರುಗಂಟಿಗಳು ವಾಲಿಕರ್ಸ್, ಮಹರಸ್, ಬಾರಿಕರಸ್, ವೀರಾಡಿಗಳು, ಬಲೂತಿದಾರಸ್ ತಳಿಯಾರಿಸ್ ವೆಟಿಸ್, ಕುಲುವಡಿಸ್, ಉರ್‌ಗಾನಿಸ್ ಕುಟುಂಬದವರಿಗೆ ಆದ್ಯತೆ ನೀಡಲಾಗುವುದು, ಅರ್ಜಿದಾರರು 25 ವರ್ಷ ವಯೋಮಾನದವರಾಗಿರಬೇಕು. ಅರ್ಜಿ ಸಲ್ಲಿಸಲು ಜುಲೈ 5 ಕೊನೆಯ ದಿನವಾಗಿರುತ್ತದೆ. ಅರ್ಜಿಯೊಂದಿಗೆ ಜನ್ಮ ದಿನಾಂಕ ವಾಸಸ್ಥಳ ದೃಢೀಕರಣ, ಪಡೆದ ಪತ್ರ ಲಗತ್ತಿಸುವುದು, ಚುನಾವಣೆ ಗುರುತಿನ ಚೀಟಿ, ಆಧಾರ್ ಕಾರ್ಡ, ಪಡಿತರ ಚೀಟಿ, ವ್ಯಾಸಾಂಗ ಪೂರೈಸಿದ ಬಗ್ಗೆ ದಾಖಲೆ, ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಕಚೇರಿ ಸಲ್ಲಿಸಬೇಕೆಂದು ತಹಶೀಲ್ದಾರ್ ಡಾ.ಅಶ್ವಥ್ ತಿಳಿಸಿದ್ದಾರೆ.

### ರಾಷ್ಟ್ರಪ್ರಶಸ್ತಿಯನ್ನು ನೀಡಲು ಅರ್ಜಿ ಆಹ್ವಾನ

» ದಾವಣಗೆರೆ

ವಿಕಲಚೇತನರ ಸಬಲೀಕರಣಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವ್ಯಕ್ತಿ, ಸಂಸ್ಥೆಗಳಿಗೆ 2024ನೇ ಸಾಲಿನ ರಾಷ್ಟ್ರ ಪ್ರಶಸ್ತಿಯನ್ನು ನೀಡಲು ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ. ವೆಬ್‌ಸೈಟ್ ವಿಳಾಸ: www.depwd.gov.in & www.awards.gov.in ರಲ್ಲಿ ಜುಲೈ 31 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಸಂಯೋಜಕರನ್ನು ಸಂಪರ್ಕಿಸಿ.

### ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

» ಹೊಸದುರ್ಗ

ಪ್ರಸ್ತುತ ಸಾಲಿನಲ್ಲಿ ಉತ್ತೀರ್ಣರಾದ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಶೇ.85 ಕ್ಕೂ ಹೆಚ್ಚು ಅಂಕ ಪಡೆದ ಚಿತ್ರದುರ್ಗ ಮತ್ತು ದಾವಣಗೆರೆ ಉಭಯ ಜಿಲ್ಲೆಗಳ ಮಡಿವಾಳ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ರಾಜ್ಯ ಶ್ರೀ ವೀರ ಮಡಿವಾಳ ಮಾಚಿದೇವ ಯುವ ಸೇನಾ ಪಡೆಯ ಸಂಸ್ಥಾಪಕ ಮತ್ತು ಕಾರ್ಯಾಧ್ಯಕ್ಷ ನಾಗತಿಹಳ್ಳಿಮಂಜುನಾಥ್ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು ಆಗಸ್ಟ್ ತಿಂಗಳ ಎರಡನೇ ವಾರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಗುವುದು,ಆಸಕ್ತರು ನಾಗತಿಹಳ್ಳಿಮಂಜುನಾಥ್, ಸಂಸ್ಥಾಪಕ ಮತ್ತು ಕಾರ್ಯಾಧ್ಯಕ್ಷ, ರಾಜ್ಯ ಶ್ರೀ ವೀರ ಮಡಿವಾಳ ಮಾಚಿದೇವ ಯುವ ಸೇನಾಪಡೆ, ಹೊಸದುರ್ಗ-577527 ಇಲ್ಲಿಗೆ ಸ್ವ ವಿವರವಿರುವ ಅರ್ಜಿಯೊಂದಿಗೆ ಒಂದು ಭಾವಚಿತ್ರ ಹಾಗೂ ಅಂಕಪಟ್ಟಿಯ ನಕಲನ್ನು ಲಗತ್ತಿಸಿ ಕಳುಹಿಸಬೇಕು.ಜುಲೈ 20 ರೊಳಗೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನವಾಗಿದ್ದು ಹೆಚ್ಚಿನ ಮಾಹಿತಿಗಾಗಿ ಮೀರಸಾಬಿಹಳ್ಳಿಶಿವಣ್ಣ ಮೋ: 7676908186 (ಮಂಜುನಾಥ್) 9986994558 ಸಂಪರ್ಕಿಸಬಹುದು.

### ವಸತಿ ಶಾಲೆಗಳ ಖಾಲಿ ಸ್ಥಾನಗಳ ದಾಖಲಾತಿಗೆ ಪ್ರವೇಶ ಪರೀಕ್ಷೆ

» ಚಿತ್ರದುರ್ಗ

ಚಿತ್ರದುರ್ಗ ಜಿಲ್ಲೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ,ಮೊರಾರ್ಜಿದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಏಕಲವ್ಯ, ಡಾ. ಬಿ.ಆರ್. ಅಂಬೇಡ್ಕರ್, ಶ್ರೀಮತಿ ಇಂದಿರಾಗಾಂದಿ ವಸತಿ ಶಾಲೆಗಳ 2024-25ನೇ ಸಾಲಿನ 7, 8 ಮತ್ತು 9ನೇ ತರಗತಿಗಳ ಖಾಲಿ ಸ್ಥಾನಗಳ ದಾಖಲಾತಿಗೆ ಇದೇ ಜುಲೈ 6ರಂದು ಬೆಳಿಗ್ಗೆ 11 ರಿಂದ 12.30 ರವರೆಗೆ ಪ್ರವೇಶ ಪರೀಕ್ಷೆ ನಡೆಯಲಿದೆ. ಪರೀಕ್ಷಾ ಕೇಂದ್ರಗಳ ವಿವರ ಇಂತಿದೆ. ಚಿತ್ರದುರ್ಗ ತಾಲ್ಲೂಕಿನ ಗೂಳಯ್ಯನಹಟ್ಟಿ ಮೊರಾರ್ಜಿ ದೇಸಾಯಿ ವಸತಿ ಶಾಲೆ (ಸಾಮಾನ್ಯ-24), ಚಳ್ಳಕೆರೆ ತಾಲ್ಲೂಕಿನ ಚಳ್ಳಕೆರೆ ನಗರದ ಪಾವಗಡ ರಸ್ತೆಯಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪ.ವರ್ಗ-26), ಹಿರಿಯೂರು ತಾಲ್ಲೂಕಿನ ದೇವರಕೊಟ್ಟ ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪ.ಜಾತಿ-33), ಹೊಳಲ್ಕೆರೆ ತಾಲ್ಲೂಕಿನ ಚಿತ್ರಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆ(ಪ.ವರ್ಗ-100), ಹೊಸದುರ್ಗ ತಾಲ್ಲೂಕಿನ ನಾಗೇನಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆ(ಹಿಂ.ವರ್ಗ-30), ಮೊಳಕಾಲ್ಮೂರು ತಾಲ್ಲೂಕಿನ ಸೂಲೇನಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪ.ವರ್ಗ-28) ಕೇಂದ್ರಗಳಲ್ಲಿ ಪರೀಕ್ಷೆ ಜರುಗಲಿದೆ.ಅರ್ಜಿ ಸ್ವೀಕರಿಸಿದ ಎಲ್ಲಾ ವಸತಿ ಶಾಲೆಗಳಲ್ಲಿ ಪ್ರವೇಶ ಪತ್ರಗಳನ್ನು ವಿತರಿಸಲಾಗುತ್ತಿದೆ. ಪ್ರವೇಶ ಪತ್ರಗಳು ತಲುಪದೇ ಇರುವ ಅಭ್ಯರ್ಥಿಗಳು ಪರೀಕ್ಷಾ ದಿನದಂದು ತಮ್ಮ ತಾಲ್ಲೂಕಿನ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಿ ತಮ್ಮ ಪ್ರವೇಶ ಪತ್ರಗಳನ್ನು ಪಡೆದು ಪರೀಕ್ಷೆ ಬರೆಯಬಹುದು ಎಂದು ಜಂಟಿ ನಿರ್ದೇಶಕ ಜಗದೀಶ್ ಹೆಬ್ಬಳ್ಳಿ ತಿಳಿಸಿದ್ದಾರೆ.

# ವಚನ ಸಾಹಿತ್ಯ ಮನೆ-ಮನ ತಲುಪಲಿ: ಜತ್ತಿ

» ಚಿತ್ರದುರ್ಗ



ಅಪರೂಪದಲ್ಲೇ, ಅಪರೂಪ ಎನ್ನುವ ವಚನ ಸಾಹಿತ್ಯ ಕೇವಲ ಮಕ್ಕಳು ಕಲಿಯಬೇಕೆಂಬ ಆಶಯ ಬೇಡ. ಅದು ಸಣ್ಣವರು ದೊಡ್ಡವರು ಅವರಿವರೆನ್ನದೆ ಪ್ರತಿಯೊಬ್ಬರಿಗೂ ಅವಶ್ಯ ಎನಿಸುವುದಾಗಿದೆ. ಪ್ರಖರ ವೈಚಾರಿಕ ಸಾಹಿತ್ಯ ಹಿಂದೆಗಿಂತ ಇಂದು ಎಲ್ಲರ ಮನೆ-ಮನ ತಲುಪಲು ಬಸವಪರ ಸಂಘಟನೆಗಳು ಕೆಲಸ ಮಾಡಬೇಕಿದೆ ಎಂದು ರಾಷ್ಟ್ರೀಯ ಬಸವಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಅವರು ಸಲಹೆ ಮಾಡಿದರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿಂದು ವಚನ ಕಮ್ಮಟ ಪುಸ್ತಕ ಪರಿಷ್ಕರಣೆಗಾಗಿ ಆಯೋಜಿಸಲಾಗಿದ್ದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಾವು ಯಾವ ಭೇದವನ್ನು ಎಣಿಸದೆ ಬಸವಣ್ಣನ ಕೆಲಸವನ್ನು ಮಾಡಬೇಕಿದೆ. ಈಗಿನ ಸಾಮಾಜಿಕ ಜಾಲತಾಣಗಳನ್ನು ಇಂತಹ ಸಾಹಿತ್ಯ ಪ್ರಚಾರ ಮತ್ತು ಪ್ರಸಾರಗೊಳ್ಳಲು ಬಳಸಿಕೊಳ್ಳಬೇಕಾಗಿದೆ. ಕರ್ನಾಟಕ ಸರ್ಕಾರ ಬಸವಣ್ಣನನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದೆ. ಅದರ ನಿಜ ಅರ್ಥವನ್ನು ಬಸವಾಭಿಮಾನಿಗಳು ಬಸವಸಂಘಟನೆಗಳು, ಮಠಾಧೀಶರು, ಸಾರ್ವಜನಿಕರು ಎಲ್ಲರೂ ಸೇರಿ ವಿಶ್ವಮಾನ್ಯಗೊಳಿಸಬೇಕಿದೆ ಎಂದರು.

ಅನೇಕ ಮಠಗಳು ಬಸವತತ್ವ, ಶರಣ ಸಂಸ್ಕೃತಿ ಪ್ರಚಾರಕ್ಕೆ ಶ್ರಮಿಸುತ್ತಿರುವುದು ಶ್ಲಾಘನೀಯ. ಇದು ವ್ಯಾಪಕವಾಗಿ ನಡೆಯಬೇಕಿದೆ. ವಚನ ಸಾಹಿತ್ಯಕ್ಕೆ ತಮ್ಮ ಇಡೀ ಬದುಕನ್ನು ಮೀಸಲಿಟ್ಟ ಫ.ಗು ಹಳಕಟ್ಟಿಯವರ ಬದುಕು ಬರಹ ಸಾಧನೆ ಎಲ್ಲ ತರಗತಿಯ ಪಠ್ಯಗಳಲ್ಲಿ ವಿದ್ಯಾರ್ಥಿಗಳಿಗೆ ಓದಲು ಲಭ್ಯವಾಗಬೇಕು. ಆನ್ಲೈನ್ ಮೂಲಕ ಜಾಗೃತಿ ಮೂಡಿಸಬೇಕು. ಸರ್ಕಾರದ ಮಟ್ಟದಲ್ಲೂ ಇಂತಹ ಪರೀಕ್ಷೆಗಳನ್ನು ಮಾಡಲು ಮನವಿ ಸಲ್ಲಿಸಬೇಕೆಂದರು.

ಗದಗ್ಗನಿವೃತ್ತಪ್ರಾಧ್ಯಾಪಕಹಾಗೂ ವಚನ ಸಂಸ್ಕೃತಿ ಚಿಂತಕ ಪ್ರೊ. ಚಂದ್ರಶೇಖರ್ ವಸ್ತ್ರದ ಮಾತನಾಡಿ, ವಚನ ಸಾಹಿತ್ಯ ಎಲ್ಲ ಬಗೆಯ ವಿದ್ಯಾರ್ಥಿಗಳನ್ನು ತಲುಪಲು ಸಹಕಾರಿಯಾಗುವಂತಹ ಪಠ್ಯಕ್ರಮ ರೂಪಿಸಬೇಕು. ವಿಜ್ಞಾನ ಓದಗರು ಬರಿ ಅದನ್ನೇ ಓದುತ್ತಾರೆ. ಅವರೂ ಸಹ ವಚನ ಸಾಹಿತ್ಯ ಓದುವಂತೆ ಪ್ರೇರೇಪಿಸಬೇಕು. ಕಥೆ, ಕಾದಂಬರಿ ರೂಪದಲ್ಲಿ ಓದುಗರನ್ನು ಮುಟ್ಟಲು ಯೋಜನೆ ರೂಪಿಸಬೇಕೆಂದು ಸಲಹೆ ನೀಡಿದರು.

ಹಿರಿಯ ಸಂಶೋಧಕ ಡಾ. ಬಿ .ರಾಜಶೇಖರಪ್ಪ ಮಾತನಾಡಿ, ವಚನಗಳು ಮತ್ತದರ ತಿರುಳು ಸೇರಿದಂತೆ ಅದರ ಜೊತೆ ಬೇರೆ ವಿಚಾರಗಳು ಇದ್ದರೆ ಅದಕ್ಕೊಂದು ಬೇರೆಯದೇ ಆದ ಓದುಗರು ಸಿಗುತ್ತಾರೆ. ಈ ಹಿನ್ನೆಲೆಯಲ್ಲಿ ಪರಿಷ್ಕರಣ ಸಮಿತಿಗೆ ಮುಂದೆ ಬರುವಾಗ ಅದಕ್ಕೆ ಪೂರ್ವ ತಯಾರಿ ಮಾಡಿಕೊಂಡು ಬರಲು ಸಲಹೆ ನೀಡಿದರೆ ಒಳ್ಳೆಯದೆಂದು ಅಭಿಪ್ರಾಯಪಟ್ಟರು.

ಗದಗ- ಗುಳೇದಗುಡ್ಡ ಬಸವ ಕೇಂದ್ರದ ಅಶೋಕ್ ಬರಗುಂಡಿ ಅವರು ಮಾತನಾಡಿ ಎಲ್ ಕೆ ಜಿ ಮಕ್ಕಳಿಂದ ನಾಲ್ಕನೇ ತರಗತಿಯ ವಿದ್ಯಾರ್ಥಿಗಳಿಗೆ ಮೌಖಿಕ ವಚನಗಳ ಕಂಠಪಾಠ ಇತ್ಯಾದಿ ಇರಬೇಕು. ಪ್ರಾಥಮಿಕ ಹಂತದಲ್ಲಿ ಒಂದೊಳ್ಳೆಯ ವಚನ ಸಂಸ್ಕೃತಿ ಸಿಕ್ಕರೆ ಅವರು ಮುಂದೆ ಎಂದೂ ವಚನ ಸಾಹಿತ್ಯವನ್ನು ಕೈ ಬಿಡುವುದಿಲ್ಲ. ವಚನ ಕಲಿಯುವುದರ ಜೊತೆಗೆ ಕನ್ನಡ ರೂಢಿಸಿಕೊಳ್ಳಲು ಸಹಕಾರಿಯಾಗುತ್ತದೆ. ಆಂಗ್ಲ ಭಾಷೆಯಲ್ಲಿ ಮಕ್ಕಳು ಹೇಗೆ ರೈಮಿಂಗ್ಸ್ ಕಲಿಯುತ್ತಾರೋ ಹಾಗೆ ವಚನಗಳು, ಶರಣರ ಬದುಕೂ ಸಹ ಆ ರೀತಿಯ ರೈಮಿಂಗ್ಸ್ ರೂಪದಲ್ಲಿ ಬಂದರೆ ಬಹುಬೇಗ ವಚನ ಸಾಹಿತ್ಯ ಮಕ್ಕಳಿಗೆ ರೂಢಿಗತವಾಗುತ್ತದೆ. ಮಕ್ಕಳಲ್ಲಿ ಆಸಕ್ತಿ ಇದೆ, ಆದರೆ ಕಲಿಸುವ, ಪ್ರೋತ್ಸಾಹ ನೀಡುವವರ ಕೊರತೆ ಇದೆ. ಅದನ್ನ ಪೋಷಕರು ನೀಗಿಸಬೇಕು. ವಚನ ಸಾಹಿತ್ಯ ಎಲ್ಲ ವಲಯದ ವರ್ಗದ ಜನರು ಕಲಿಯಬಹುದಾಗಿದೆ. ಇದಕ್ಕಾಗಿ ಬಸವ ಸಂಘಟನೆಗಳು ಒಟ್ಟಾಗಿ ಕೆಲಸ ಮಾಡಬೇಕಿದೆ ಎಂದು ಸಲಹೆ ನೀಡಿದರು.

ಶಿಗ್ಗಾವಿ ಕುನ್ನೂರು ಕಾಲೇಜಿನ ಪ್ರಾಚಾರ್ಯ ನಾಗರಾಜ ದ್ಯಾಮನಕೊಪ್ಪ ಮಾತನಾಡಿ, ಕಳೆದ 28 ವರ್ಷಗಳ ಹಿಂದೆ ಚಿತ್ರದುರ್ಗ ಮುರುಘಾಮಠದಿಂದ ಆರಂಭಗೊಂಡ ಈ ವಚನ ಕಮ್ಮಟ ಪರೀಕ್ಷೆ ಮೊದಲು ಸಾವಿರ ನಂತರ, ಲಕ್ಷ ಸಂಖ್ಯೆಯಲ್ಲಿ ಕಟ್ಟಿದ್ದುಂಟು, ಅದು ಈಗಲೂ ನಡೆದಿದೆ. ವೇಗ ಜಾಸ್ತಿಯಾಗಬೇಕಿದೆ. ಅದಕ್ಕೆ ತಕ್ಕ ಪ್ರಯತ್ನ ಅಗತ್ಯವಿದೆ ಎಂದರು.

ಶಿಗ್ಗಾವಿಯ ಉಪನ್ಯಾಸಕರಾದ ಎಸ್. ವಿ. ಕುಲಕರ್ಣಿ, ಡಾ. ಯಶೋಧಾ ರಾಜಶೇಖರಪ್ಪ, ಶಂಕರ್ ಬೇವಿನ ಗಿಡ, ಚಂದ್ರಶೇಖರ್ ಬಿ. ನಾಗರಹಾಳ, ತಾಳಿಕೋಟೆಯ ಶಿವಶಂಕರ್ ಅಕ್ಕಿ, ಬಸವರಾಜ ಕಟ್ಟಿ, ಎಂ.ಜಿ. ರುದ್ರಮೂರ್ತಿ, ಡಾ. ಸಿ.ಟಿ. ಜಯಣ್ಣ ಮತ್ತಿತರರು ಉಪಸ್ಥಿತರಿದ್ದರು

# ಚಳ್ಳಕೆರೆ: ಸಾರ್ವಜನಿಕ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಕೇಂದ್ರ ಸ್ಥಾಪನೆ

» ಚಳ್ಳಕೆರೆ



ಇತ್ತೀಚಿನ ದಿನಗಳಲ್ಲಿ ಡೆಂಘಿಜ್ವರ ಎಲ್ಲೆಡೆ ಹರಡುವ ಭೀತಿ ಇದ್ದು, ರೋಗಿಗಳ ಸುರಕ್ಷತೆ ದೃಷ್ಠಿಯಿಂದ ವೈದ್ಯರು ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಶಾಸಕ, ಸಣ್ಣ ಕೈಗಾರಿಕೆ ಅಭಿವೃದ್ದಿ ಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿ ತಿಳಿಸಿದರು.

ಅವರು, ಗುರುವಾರ ಸಾರ್ವಜನಿಕ ಆಸ್ಪತ್ರೆಯ ಸಭಾಂಗಣದಲ್ಲಿ ಮೈಸೂರಿನ ಬ್ಯಾಂಕ್ ನೋಟ್‌ಮಿಲ್ ಇಂಡಿಯಾ ಪ್ರೈ.ಲಿ.ನವರು ನಿರ್ಮಿಸಿದ ಉನ್ನತ್ತೀಕರಣದ ಡಯಾಲಿಸಿಸ್ ಸೆಂಟರನ್ನು ಉದ್ಘಾಟಿಸಿ ಮಾತನಾಡಿದರು. ಸಾರ್ವಜನಿಕ ಆಸ್ಪತ್ರೆಯ ವೈದ್ಯರ ಮೇಲೆ ಜನತೆ ಹೆಚ್ಚು ಭರವಸೆ ಇಟ್ಟಿದ್ದು, ಎಲ್ಲರೋಗಿಗಳು ರೋಗಮುಕ್ತರಾಗಿ ಮನೆಗೆ ತೆರಳುವ ವಾತಾವರಣವನ್ನು ವೈದ್ಯರ ನಿರ್ಮಾಣ ಮಾಡಬೇಕೆಂದರು.

ಕಾರ್ಯಕ್ರಮದಲ್ಲಿ ಬ್ಯಾಂಕ್ ನೋಟ್‌ಮಿಲ್ ಇಂಡಿಯಾ ಪ್ರೈ.ಲಿ.ನ ವ್ಯವಸ್ಥಾಪಕ ತಾಳಿಕೇರಪ್ಪ, ಲಕ್ಷ್ಮಿಕಾಂತ್, ಸಾರ್ವಜನಿಕ ಆಸ್ಪತ್ರೆ ಆರೋಗ್ಯಾಧಿಕಾರಿ ಡಾ.ಜೆ.ಡಿ.ವೆಂಕಟೇಶ್, ನಗರಸಭಾ ಸದಸ್ಯರಾದ ಕೆ.ವೀರಭದ್ರಪ್ಪ, ಸುಮಭರಮಯ್ಯ, ಕವಿತಾಬೋರಯ್ಯ, ಎಂ.ಜೆ.ರಾಘವೇಂದ್ರ, ರಮೇಶ್‌ಗೌಡ, ನಾಮಿನಿ ಸದಸ್ಯರಾದ ಬಡಗಿಪಾಪಣ್ಣ, ಅನ್ವರ್‌ಮಾಸ್ಟರ್, ನೇತಾಜಿಪ್ರಸನ್ನ, ನಟರಾಜು, ಭದ್ರಿ, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಶಿವಸ್ವಾಮಿ, ಮೂಡಲಗಿರಿಯಪ್ಪ, ಶ್ರೀನಿವಾಸ್ ಮುಂತಾದವರು ಉಪಸ್ಥಿತರಿದ್ದರು.

## ಅದಿರು ಸಾಗಾಣಿಕೆ ವಾಹನ ವಶ




» ಚಿತ್ರದುರ್ಗ

ಅನಧಿಕೃತವಾಗಿ ಕಬ್ಬಿಣದ ಅದಿರು ಸಾಗಾಣಿಕೆ ಮಾಡುತ್ತಿದ್ದ ವಾಹನಗಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಚಳ್ಳಕೆರೆಯಲ್ಲಿ ಬುಧವಾರ ರಾತ್ರಿ ವಶಪಡಿಸಿಕೊಂಡಿದ್ದಾರೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಪನಿರ್ದೇಶಕ ಡಾ.ಎಂ.ಜೆ.ಮಹೇಶ್, ಹಿರಿಯ ಭೂ ವಿಜ್ಞಾನಿ ಕೆ.ಎಸ್.ನಾಗೇಂದ್ರಪ್ಪ ಅವರ ನೇತೃತ್ವದಲ್ಲಿ ಭೂ ವಿಜ್ಞಾನಿಗಳಾದ ಬಿ.ಎನ್.ಉಮಾಪತಿ ಮತ್ತು ಪಿ.ಮಂಜಪ್ಪ ಹಾಗೂ ಸಿಬ್ಬಂದಿಗಳಾದ ಚೇತನ್ ಮತ್ತು ಜಾಕೀರ್ ಅವರೊಂದಿಗೆ ಗಸ್ತು ಕಾರ್ಯ ನಡೆಸಿ ಅನಧಿಕೃತವಾಗಿ ಕಬ್ಬಿಣದ ಅದಿರು ಸಾಗಾಣಿಕೆ ಮಾಡುತ್ತಿದ್ದ ಮೂರು ವಾಹನಗಳನ್ನು ವಶಪಡಿಸಿಕೊಂಡು ಚಳ್ಳಕೆರೆ ಪೊಲೀಸ್ ಠಾಣೆ ವಶಕ್ಕೆ ನೀಡಲಾಗಿದೆ. ಎಂ.ಎಂ (ಆರ್ ಅಂಡ್ ಡಿ) ಆಕ್ಟ್ 1957ರಂತೆ ವಾಹನಗಳ ಮಾಲೀಕರು, ಚಾಲಕರು ಹಾಗೂ ಇದಕ್ಕೆ ಭಾಗಿಯಾಗಿರುವವರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ.

# 7ರಂದು ನಗರದಲ್ಲಿ ಭಗೀರಥ ಜಯಂತ್ಯೋತ್ಸವ

» ಚಿತ್ರದುರ್ಗ



ಭಗೀರಥ ಜಯಂತ್ಯೋತ್ಸವ, ತಾಲ್ಲೂಕು ಸಂಘದ ಉದ್ಘಾಟನೆ, ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ.ಯಲ್ಲಿ ಅತಿ ಹೆಚ್ಚಿನ ಅಂಕಗಳನ್ನು ಗಳಿಸಿರುವ ತಾಲ್ಲೂಕು ಉಪ್ಪಾರ ಸಮಾಜದ ವಿದ್ಯಾರ್ಥಿಗಳಿಗೆ ಜು.7 ರಂದು ಬೆಳಿಗ್ಗೆ 10-30 ಕ್ಕೆ ಮೆದೆಹಳ್ಳಿ ರಸ್ತೆ ಅಯ್ಯಪ್ಪಸ್ವಾಮಿ ದೇವಸ್ಥಾನದ ಹತ್ತಿರವಿರುವ ಶಿವಮೂರ್ತಿ ಶಿವಾಚಾರ್ಯ ಲೇಔಟ್ ಪಕ್ಕದ ಜಾಗದಲ್ಲಿ ಪ್ರತಿಭಾ ಪುರಸ್ಕಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಉಪ್ಪಾರ ಸಮಾಜದ ಅಧ್ಯಕ್ಷ ಎಸ್.ಸಿದ್ದೇಶ್ವರ ತಿಳಿಸಿದರು.ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಶಾಸಕರು ಹಾಗೂ ಕರ್ನಾಟಕ ರಾಜ್ಯ ಉಪ್ಪಾರ ಸಂಘದ ಅಧ್ಯಕ್ಷ ಪುಟ್ಟರಂಗಶೆಟ್ಟಿ ಸಮಾರಂಭ ಉದ್ಘಾಟಿಸಲಿದ್ದಾರೆ.ಭಗೀರಥ ಪೀಠದ ಡಾ.ಪುರಷೋತ್ತಮಾನಂದಪುರಿ ಸ್ವಾಮೀಜಿ, ಕಬೀರಾನಂದಾಶ್ರಮದ ಶಿವಲಿಂಗಾನಂದ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಸ್ವಾಮೀಜಿ,ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಚಳ್ಳಕೆರೆ ನರಹರಿ ಆಶ್ರಮದ ರಾಜಾರಾಂ ಗುರುಗಳು ಸಾನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್, ಶಾಸಕರುಗಳಾದ ಕೆ.ಸಿ.ವೀರೇಂದ್ರಪಪ್ಪಿ, ಟಿ.ರಘುಮೂರ್ತಿ, ಡಾ.ಎಂ.ಚಂದ್ರಪ್ಪ, ಸಂಸದ ಗೋವಿಂದ ಕಾರಜೋಳ, ಪಾಲ್ಗೊಳ್ಳಲಿದ್ದಾರೆ.



ಕರ್ನಾಟಕ ಆದಿಜಾಂಬವ ಅಭಿವೃದ್ದಿ ನಿಗಮದ ಅಧ್ಯಕ್ಷರಾಗಿ ನೇಮಕಗೊಂಡಿರುವ ಜಿ.ಎಸ್.ಮಂಜುನಾಥ್‌ರವರನ್ನು ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಬಸವರಾಜ್ ಕುರುಬರಹಳ್ಳಿ ಸನ್ಮಾನಿಸಿ ಶುಭ ಕೋರಿದರು. ಜಿ.ಎಸ್.ಮಂಜುನಾಥ್‌ರವರ ನಿವಾಸಕ್ಕೆ ತೆರಳಿ ಬೃಹದಾಕಾರವಾದ ಹಾಕಿ ಬಸವರಾಜ್ ಕುರುಬರಹಳ್ಳಿ ಇವರು ಸನ್ಮಾನಿಸಿದ ಸಂದರ್ಭದಲ್ಲಿ ನ್ಯಾಯವಾದಿ ಸುರೇಶ್, ಕಲ್ಲುಂಟೆ ಗ್ರಾಮ ಪಂಚಾಯಿತಿ ಸದಸ್ಯ ಗುರುಮೂರ್ತಿ, ಮೈಲಾರಪ್ಪ ಇನ್ನು ಅನೇಕರು ಹಾಜರಿದ್ದರು.

## ಪ್ರಮುಖ ಸುದ್ದಿ

# ಜುಲೈ 6 ಮತ್ತು 7ರಂದು ರಾಷ್ಟ್ರೀಯ ವಿಚಾರ ಸಂಕಿರಣ

» ಚಿತ್ರದುರ್ಗ

ದಾವಣಗೆರೆ ವಿಶ್ವವಿದ್ಯಾನಿಲಯ, ಜಿ.ಆರ್. ಹಳ್ಳಿಯ ಜ್ಞಾನಗಂಗೋತ್ರಿ ಸ್ನಾತಕೋತ್ತರ ಅಧ್ಯಯನ ಕೇಂದ್ರ ಕನ್ನಡ ಅಧ್ಯಯನ ವಿಭಾಗ ಹಾಗೂ ಶಿವಗಂಗೋತ್ರಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಇವರ ಸಹಯೋಗದಲ್ಲಿ ಇದೇ ಜುಲೈ 6 ಮತ್ತು 7ರಂದು ಬೆಳಿಗ್ಗೆ 10.30ಕ್ಕೆ ಚಿತ್ರದುರ್ಗ ಜಿ.ಆರ್.ಹಳ್ಳಿಯ ಜ್ಞಾನ ಗಂಗೋತ್ರಿ ಸ್ನಾತಕೋತ್ತರ ಅಧ್ಯಯನ ಕೇಂದ್ರದ ವಿಜ್ಞಾನ ಭವನದಲ್ಲಿ "ಕನ್ನಡ ಸಾಹಿತ್ಯ ಸಂಶೋಧನೆಯ ಹೊಸ ಸಾಧ್ಯತೆಗಳು" ಕುರಿತು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ" ಆಯೋಜಿಸಲಾಗಿದೆ.

ಸಂಸ್ಕೃತಿ ಚಿಂತಕ ಪ್ರೊ.ಬರಗೂರು ರಾಮಚಂದ್ರಪ್ಪ ಅವರು ಕಾರ್ಯಕ್ರಮ ಉದ್ಘಾಟಿಸಿ, ಕೃತಿ ಲೋಕಾರ್ಪಣೆ ಮಾಡುವರು. ದಾವಣಗೆರೆ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಬಿ.ಡಿ.ಕುಂಬಾರ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿವಿ ಮೌಲ್ಯಮಾಪನ ಕುಲಸಚಿವ ಸಿ.ಕೆ.ರಮೇಶ್, ಹಣಕಾಸು ಅಧಿಕಾರಿ ದ್ಯಾಮನಗೌಡ ಮುದ್ದನಗೌಡ್ರ, ಕುವೆಂಪು ವಿ.ವಿಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ ನಿರ್ದೇಶಕ ಡಾ.ನೆಲ್ಲಿಕಟ್ಟೆ ಎಸ್ ಸಿದ್ದೇಶ್, ಚಿತ್ರದುರ್ಗ ಸ್ನಾತಕೋತ್ತರ ಅಧ್ಯಯನ ಕೇಂದ್ರ ಸಂಯೋಜನಾಧಿಕಾರಿ ಎಂ.ಯು.ಲೋಕೇಶ್, ದಾವಣಗೆರೆ ವಿ.ವಿ. ಕನ್ನಡ ಅಧ್ಯಯನ ವಿಭಾಗದ ಅಧ್ಯಕ್ಷ ಡಾ. ವಿ.ಜಯರಾಮಯ್ಯ, ಶಿಕಾರಿಪುರ ಸುವ್ವಿ ಪಬ್ಲಿಕೇಷನ್ ಪ್ರಕಾಶಕ ಬಿ.ಎನ್.ಸುನೀಲ್ ಕುಮಾರ್, ಚಾಮರಾಜನಗರ ಸೃಜನಿ ಜರ್ನಲ್ ಸಂಪಾದಕ ಡಾ.ಬಿ.ಆರ್. ಮಂಜುನಾಥ್ ಭಾಗವಹಿಸುವರು.

**ಉಪನ್ಯಾಸ ಗೋಷ್ಠಿ-1:** ಜುಲೈ 6ರಂದು ಮದ್ಯಾಹ್ನ 2 ರಿಂದ 3 ಗಂಟೆಯವರೆಗೆ ಪ್ರಾಚೀನ ಕನ್ನಡ ಸಾಹಿತ್ಯ ಸಂಶೋಧನೆಯ ಹೊಸ ಸಾಧ್ಯತೆಗಳು ಕುರಿತು ವಿಮರ್ಶಕ ಬಸವರಾಜ್ ಕಲ್ಗುಡಿ ಉಪನ್ಯಾಸ ನೀಡುವರು. ಉಪನ್ಯಾಸ ಗೋಷ್ಠಿ-2: ಮಧ್ಯಾಹ್ನ 3 ರಿಂದ 4 ರವರೆಗೆ ಮಧ್ಯಕಾಲೀನ ಕನ್ನಡ ಸಾಹಿತ್ಯ ಸಂಶೋಧನೆಯ ಹೊಸ ಸಾಧ್ಯತೆಗಳು ಕುರಿತು ಬೆಂಗಳೂರು ವಿ.ವಿಯ



ಕನ್ನಡ ಅಧ್ಯಯನ ಕೇಂದ್ರ ಪ್ರಾಧ್ಯಾಪಕಿ ಎಚ್.ಶಶಿಕಲಾ ಉಪನ್ಯಾಸ ನೀಡುವರು. ಉಪನ್ಯಾಸ ಗೋಷ್ಠಿ-3: ಸಂಜೆ 4 ರಿಂದ 5 ಗಂಟೆಯವರೆಗೆ ತತ್ವಪದ ಸಾಹಿತ್ಯ ಸಂಶೋಧನೆ ಹೊಸ ಸಾಧ್ಯತೆಗಳ ಕುರಿತು ಚಿತ್ರದುರ್ಗ ಜಿಲ್ಲೆಯ ಸಂಸ್ಕೃತಿ ಚಿಂತಕರು ಹಾಗೂ ಪ್ರಾಧ್ಯಾಪಕ ಪ್ರೊ.ಜೆ.ಕರಿಯಪ್ಪ ಮಾಳಿಗೆ ಉಪನ್ಯಾಸ ನೀಡುವರು.


**ಉಪನ್ಯಾಸ ಗೋಷ್ಠಿ-4:** ಸಂಜೆ 5 ರಿಂದ ಸ್ತ್ರೀವಾದಿ ಸಾಹಿತ್ಯ ಸಂಶೋಧನೆಯ ಹೊಸ ಸಾಧ್ಯತೆಗಳ ಕುರಿತು ತುಮಕೂರು ವಿ.ವಿ.ಯ ಸಹ ಪ್ರಾಧ್ಯಾಪಕಿ ಡಾ.ಗೀತಾ ವಸಂತ ಉಪನ್ಯಾಸ ನೀಡುವರು.

ಜುಲೈ 7 ರಂದು ಬೆಳಿಗ್ಗೆ 9 ರಿಂದ 10.30 ರವರೆಗೆ ಸಂಶೋಧಕರ ಪ್ರಬಂಧ ಮಂಡನೆ ಮಾಡಲಿದ್ದು, ಕುವೆಂಪು ವಿ.ವಿಯ ಪ್ರಾಧ್ಯಾಪಕ ಪ್ರೊ. ಶಿವಾನಂದ ಕೆಳಗಿನಮನಿ ಅಧ್ಯಕ್ಷತೆ ವಹಿಸುವರು.

**ಉಪನ್ಯಾಸ ಗೋಷ್ಠಿ-5:** ಅಂದು ಬೆಳಿಗ್ಗೆ 10.30 ರಿಂದ 11.30 ರವರೆಗೆ ನವೋದಯ ಸಾಹಿತ್ಯ ಸಂಶೋಧನೆಯ ಹೊಸ ಸಾಧ್ಯತೆಗಳ ಕುರಿತು ಕುವೆಂಪು ವಿ.ವಿ ಪ್ರಾಧ್ಯಾಪಕ ಪ್ರೊ. ಜಿ.ಪ್ರಶಾಂತ ನಾಯಕ ಉಪನ್ಯಾಸ ನೀಡುವರು.

**ಉಪನ್ಯಾಸ ಗೋಷ್ಠಿ-6:** ಬೆಳಿಗ್ಗೆ 11.30 ರಿಂದ 12.30 ರವರೆಗೆ ನವ್ಯ ಸಾಹಿತ್ಯ ಸಂಶೋಧನೆಯ ಹೊಸ ಸಾಧ್ಯತೆಗಳ ಕುರಿತು ವಿಮರ್ಶಕರು ಹಾಗೂ ಪ್ರಾಧ್ಯಾಪಕರಾದ ಡಾ. ತಾರಿಣಿ ಶುಭದಾಯಿನಿ ಉಪನ್ಯಾಸ ನೀಡುವರು. 7ನೇ ಉಪನ್ಯಾಸ ಗೋಷ್ಠಿಯಲ್ಲಿ ದಲಿತ ಬಂಡಾಯ ಸಾಹಿತ್ಯ ಸಂಶೋಧನೆಯ ಕುರಿತು ದಾವಣಗೆರೆಯ ಸಂಸ್ಕೃತಿ ಚಿಂತಕ ಪ್ರೊ. ಎಂ.ಬಿ ರಾಮಚಂದ್ರಪ್ಪ, ಕೊನೆಯದಾಗಿ 8ನೇ ಉಪನ್ಯಾಸ ಗೋಷ್ಠಿಯಲ್ಲಿ ಜಾನಪದ ಸಂಸ್ಕೃತಿ ಹೊಸ ಸಾಧ್ಯತೆಗಳ ಕುರಿತು ಕುವೆಂಪು ವಿ.ವಿಯ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಎಸ್.ಎಂ.ಮುತ್ತಯ್ಯ ಉಪನ್ಯಾಸ ನೀಡುವರು.

**ಸಮಾರೋಪ ಸಮಾರಂಭ:** ಜುಲೈ 7ರಂದು ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ದಾವಣಗೆರೆ ವಿವಿ ಆಡಳಿತ ಕುಲಸಚಿವ ಪ್ರೊ.ಯು.ಎಸ್. ಮಹಾಬಲೇಶ್ವರ ಅಧ್ಯಕ್ಷತೆವಹಿಸುವರು. ಮುಖ್ಯ ಅತಿಥಿಗಳಾಗಿ ಹಂಪಿ ಕನ್ನಡ ವಿವಿ ಪ್ರಾಧ್ಯಾಪಕ ಪ್ರೊ.ತಾರಿಹಟ್ಟಿ ಹನುಮಂತಪ್ಪ, ದಾವಣಗೆರೆ ವಿವಿ ಕನ್ನಡ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಜೋಗಿನಕಟ್ಟೆ ಮಂಜುನಾಥ್, ಡಾ.ಕೆ.ಮಲ್ಲಿಕಾರ್ಜುನ್, ಡಾ.ಹೆಚ್.ವಿ.ಶಾಂತರಾಜು, ಕುವೆಂಪು ವಿವಿ ಸಹ್ಯಾದ್ರಿ ಕಲಾ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಹಾ.ಮ.ನಾಗಾರ್ಜುನ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.



# ನನ್ನ ಅಪ್ಪನಿಗೆ ಶುಭಾಶಯಗಳನ್ನು ಹೇಗೆ ಹೇಳಲಿ?

ಡಾ.ವೆಂಕಟೇಶಯ್ಯ ನೆಲ್ಲುಕುಂಟೆ ಅವರ ಬರಹ..



ಇವನು ಕಳ್ಳ ಆಗ್ತಾನೆ ಇಲ್ಲ ಪೊಲೀಸ್ ಆಗ್ತಾನೆ ಅಂತ ಅಪ್ಪ ಹೇಳಿದ್ದರಂತೆ. ಪೊಲೀಸ್ ಆಗುವುದಕ್ಕಿಂತ ಕಳ್ಳ ಆಗಿಬಿಡಬಹುದೆ ಎಂಬ ಭಯವೇ ಅಪ್ಪನಿಗೆ ತೀವ್ರವಾಗಿದ್ದಿರಬಹುದು. ನಾನು ಅವೆರಡೂ ಆಗಲಿಲ್ಲ. ಅಪ್ಪ ಹೋದ ಮೇಲೆ ಅಮ್ಮ ನನ್ನನ್ನು ರುಬ್ಬತೊಡಗಿದಳು. ಸಣ್ಣ ದೂರು ಬಂದರೂ ಹಿಡಿದು ಕಂಬಕ್ಕೆ ಕಟ್ಟಿ ಮೆಣಸಿನ ಕಾಯಿ ಊದರ ಹಾಕುತ್ತಿದ್ದಳು. ವಯಸ್ಸಿನಲ್ಲಿ ತುಸು ಹಿರಿಯನಾಗಿದ್ದ ಗಿತ್ತಪ್ಪನಿಗೆ ಪೋರ ನೀಯಬ್ಬ ಎಂದ ಒಂದೇ ಮಾತಿಗೆ ಪ್ರಜ್ಞೆ ತಪ್ಪುವವರೆಗೆ ಹೊಗೆ ಹಾಕಿಸಿಕೊಂಡಿದ್ದೆ. ಕಡೆಗೆ ದೂರು ಹೇಳಿದ್ದ ಗಿತ್ತಪ್ಪನೇ ಓಡಿ ಬಂದು ಅಯ್ಯೊ ಸಚ್ಚಿ ಪೋತಾಡಮ್ಮ ಅಂತ ಗೋಳಾಡಿ ಬಿಡಿಸಿದ್ದ. ಅಪ್ಪನಿಲ್ಲದ ಮಕ್ಕಳು ಹಾದಿ ತಪ್ಪಬಾರದೆಂದು ಅಮ್ಮ ಕೊಟ್ಟ ಶಿಕ್ಷೆಗಳು ಬಹುಶಃ ನನ್ನ ಸುಪ್ತ ಪ್ರಜ್ಞೆಯವರೆಗೂ ಇಳಿದು ಕಾಪಾಡುತ್ತಿವೆ. ಕೆಟ್ಟ ಮಾತು, ಕೆಟ್ಟ ಯೋಚನೆಗಳು ಸುಳಿಯದಂತೆ ಕಾಪಾಡಿವೆ.

ಇದರಿಂದಾಗಿ ಕಳ್ಳನಾಗುವ ಯಾವ ಸಾಧ್ಯತೆಗಳೂ ಇಲ್ಲವಾದವು. ಬಹುಶಃ ನಾನು ಕದ್ದಿದ್ದು ಒಂದು ಪುಟ್ಟ ಹೃದಯವನ್ನು ಮಾತ್ರ. ಅದಕ್ಕೂ ಅಮ್ಮ ಸಿಟ್ಟಿಗೆದ್ದಿದ್ದಳು.

ಪೊಲೀಸಾಗುವ ಎಲ್ಲ ಅವಕಾಶಗಳೂ ಇದ್ದವು. ಅರ್ಜಿ ಭರ್ತಿ ಮಾಡುವಾಗ ಮೊದಲ ಆಪ್ಷನ್ನು ನೀಡಿ ಡಿ ವೈ ಎಸ್ ಪಿ ಎಂದು ಭರ್ತಿ ಮಾಡಿದ್ದರೆ ಐ ಪಿ ಎಸ್ ಬಂದು ನಾಲ್ಕು ವರ್ಷಗಳಾಗಿರುತ್ತಿದ್ದವು. ಸಾಹಿತ್ಯದ ಓದು ಮತ್ತಿತರ ಕಾರಣಗಳಿಂದ ಪೊಲೀಸಾಗುವುದು ಇಷ್ಟವಿರಲಿಲ್ಲ. ಹಾಗಾಗಿ ಅದೂ ತಪ್ಪಿ ಹೋಯಿತು. ಅಪ್ಪನ ಅಂದಾಜು ಸುಳ್ಳಾಯಿತು.

ಅಮ್ಮನಿಗೆ ಬೇಡದೆ ಹುಟ್ಟಿದ ಮಗುವಾದ್ದರಿಂದ ಆರಂಭದಲ್ಲಿ ತುಸು ಅಸಡ್ಡೆ ಮಾಡಿರಬೇಕು. ನಾನು ಹುಟ್ಟಿದ ನಂತರ ಹನ್ನೊಂದು ವರ್ಷ ಮಾತ್ರ ಬದುಕಿದ್ದ ಅಪ್ಪನಿಗೆ ನನ್ನ ಬಗ್ಗೆ ಯಾಕೆ ಹಾಗೆನ್ನಿಸಿತ್ತೊ ಗೊತ್ತಿಲ್ಲ. ಬಹುಶಃ ನನ್ನ ಮಹಾ ಘಟಿಂಗ ಸ್ವಭಾವವನ್ನು ಕಂಡೆ ಹಾಗೆ ಹೇಳಿದ್ದರೊ ಗೊತ್ತಿಲ್ಲ. ನಮ್ಮ ಕುಟುಂಬದ ಮೇಲೆ ಜಗಳ ಮಾಡಿ ಅಮ್ಮನ ಕಣ್ಣೊಳಗೆ ಅಳು ಬರಿಸಿದ್ದ ಚಿಕ್ಕಪ್ಪನ ಹಣೆಗೆ ಚೂಪು ಕಲ್ಲೆಸೆದು ರಕ್ತ ಸುರಿಯುವಂತೆ ಮಾಡಿದ್ದರಿಂದ ಹಾಗನ್ನಿಸಿತ್ತೊ .ಇಲ್ಲ ಗೋವಿಂದನೆಂಬ ಗೆಳೆಯನ ಜೊತೆ ಸೇರಿ ಸೀಬೆ ತೋಟದ ಮುದುಕ ಮಾಲಿಕ ಬೈದನೆಂದು ಅವನ ಬಾವಿ ಮೆಟ್ಟಿಲುಗಳ ಮೇಲೆ ದೊಡ್ಡ ಕಲ್ಲು ತಳ್ಳಿ ಮುರಿದು ಹಾಕಿದ್ದರಿಂದ ಹಾಗನ್ನಿಸಿತೊ ಅಥವಾ ಮನೆದೇವರ ಮುಡುಪಿನ ದುಡ್ಡು ಕದ್ದು ದೊಡ್ಡಮ್ಮಣ್ಣಿ ಅಂಗಡಿಯಲ್ಲಿ ಬೋಟಿ, ಚಕ್ಕುಲಿ, ಕೋಡುಬಳೆ, ಕಡ್ಡಿ ಪೆಪ್ಪರಮಿಂಟು ತಿಂದು ಏನೂ ಆಗದಂತೆ ಬಟ್ಟೆಗೆ ಒರೆಸಿಕೊಂಡು ಓಡಾಡಿದ್ದನ್ನು ನೋಡಿ ಹಾಗನ್ನಿಸಿತ್ತೊ ಅಂತೂ ಇಷ್ಟವಾಗದ ಭವಿಷ್ಯವನ್ನಂತೂ ನುಡಿದಿದ್ದರು. ಅಪ್ಪ ಶಾಸ್ತ್ರ ಹೇಳುತ್ತಿದ್ದರು. ಅವರ ಬಾಯಲ್ಲಿ ನನ್ನ ಭವಿಷ್ಯದ ಬಗ್ಗೆ ಕೆಟ್ಟ ಮಾತು ಕೇಳಿದ್ದ ಅಮ್ಮ ಸಿಕ್ಕಾಪಟ್ಟೆ ಹೆದರಿದ್ದಳು ಅಂತ ಕಾಣಿಸ್ತದೆ.

ಅಲ್ಲಿಂದಾಚೆಗೆ ಶುರುವಾಯಿತು ಸಂಕಷ್ಟದ ಸರಮಾಲೆ.

ಅಂತ ದುಃಖದ ಬದುಕು ಯಾರಿಗೂ ಬರಬಾರದು. ಯಾರ ಹಿತ್ತಿಲಲ್ಲಿ ಜೇನು ಕಳುವಾದರೂ ದೂರು ನನ್ನ ಮೇಲೆ ಬರುತ್ತಿತ್ತು. ಅದಕ್ಕೊಂದು ಕಾರಣವೂ ಇತ್ತು. ಜೇನು ದುಂಬಿಗಳು ನೀರು , ಹೂವುಗಳ ಮಕರಂದ ಕುಡಿದು ಹಾರಿ ಹೋಗುವ ದಿಕ್ಕು ಹಿಡಿದು, ಅವುಗಳು ಗೂಡು ಕಟ್ಟಿರುವ ತಾವನ್ನು ಕ್ಷಣಾರ್ಧದಲ್ಲಿ ಪತ್ತೆ ಮಾಡುತ್ತಿದ್ದೆ. ಪೊದೆಗಳನ್ನು ಏಕಾಗ್ರತೆಯಿಂದ ನೋಡಿ ಯಾವ ಜಾಗದಲ್ಲಿ ದುಂಬಿ ಇಳಿಯುತ್ತವೆ, ಅವುಗಳ ಕಾಲಲ್ಲಿರುವ ಹೂವಿನ ಹೂರಣ ನೋಡಿ ತುಪ್ಪ ಇದೆಯೊ ಇಲ್ಲವೊ, ಎನ್ನುವುದನ್ನು ಗಮನಿಸಿ ಜೇನು ಕೀಳುತ್ತಿದ್ದೆ. ಇದು ಊರಲ್ಲಿ ಹೆಮ್ಮೆಯ ವಿಷಯವಾಗುವುದರ ಬದಲು ಶಾಪವಾಗತೊಡಗಿತು. ಹಲಸಿನ ಹಣ್ಣುಗಳನ್ನೂ ಅಷ್ಟೆ. ಯಾವ ಕಾಯಿ ತುಸು ಬಣ್ಣ ಬದಲಿಸಿಕೊಂಡಿದೆ, ಅದರ ಸುತ್ತ ನಸರಿ ನೊಣಗಳು ಹಾರುತ್ತಿವೆಯೆ ಎಂದು ಗಮನಿಸಿ ಅದರ ತೊಟ್ಟಿಗೆ ಚೂಪು ಕಲ್ಲು ಬೀಸಿ ಎಸೆದು ಬೀಳಿಸುತ್ತಿದ್ದೆವು. ಬಿದ್ದ ಹಣ್ಣಿನ ತೊಟ್ಟನ್ನು ಬಾಯಲ್ಲಿ ಕಚ್ಚಿಕೊಂಡು ಎರಡೂ ಕೈ ಬೀಸಿಕೊಂಡು ಹಿಂದೆಯಿಂದ ನೋಡಿದರೆ ಬರಿಗೈಯಲ್ಲಿ ಹೋಗುತ್ತಿದ್ದಾರೆ ಮಕ್ಕಳು ಎಂಬ ಭಾವನೆ ಹುಟ್ಟಿಸುವಂತೆ ನಡೆಯುವ ಅಸಾಧ್ಯ ಕಲೆ ಗೋವಿಂದನಿಗಿತ್ತು. ಇಬ್ಬರೂ ಸೇರಿದರೆ ಪ್ರಳಯಾಂತಕ ಐಡಿಯಾಗಳು ಹೊಳೆಯುತ್ತಿದ್ದವು. 6 ವರ್ಷಕ್ಕೆ ಈಜು ಕಲಿತು 7–8 ವರ್ಷಗಳಾಗುವ ಹೊತ್ತಿಗೆ ಇಪ್ಪತ್ತು ಅಡಿ ಮೇಲಿನಿಂದ ಜಿಗಿಯುತ್ತಿದ್ದೆವು. ನಮ್ಮಿಬ್ಬರ ಘಟಿಂಗ ಬುದ್ಧಿ ನೋಡಿ ಊರ ಜನ ತಮ್ಮ ಮಕ್ಕಳನ್ನು ನಮ್ಮ ಜೊತೆ ಬಿಡುತ್ತಿರಲಿಲ್ಲ, ಅಥವಾ ಆಡಲು ಸಾಧ್ಯವಾಗದ ಮಟ್ಟಿಗೆ ಕೆಲಸಗಳಲ್ಲಿ ತೊಡಗುತ್ತಿದ್ದೆವು.

ಊರಿನಲ್ಲಿ ನಡೆದ ಎಲ್ಲ ಅನಿಷ್ಟದ ಘಟನೆಗಳು ನಮ್ಮ ತಲೆಗೆ ಸುತ್ತಿಕೊಳ್ಳುತ್ತಿದ್ದವು. ಸಾಹಸ ಮಾಡುವಾಗ ಉಂಟಾಗುತ್ತಿದ್ದ ರೋಮಾಂಚನಗಳು ಒದೆ ತಿನ್ನುವಾಗ ಮಾಯವಾಗುತ್ತಿದ್ದವು. ಇನ್ನೆಂದೂ ತಪ್ಪು ಮಾಡುವುದಿಲ್ಲ ಎಂದು ಗೋಗರೆದು ಕಠೋರ ಶಿಕ್ಷೆಯಿಂದ ಬಚಾವಾಗುತ್ತಿದ್ದೆ. ಆದರೆ ಮತ್ತದೆ ಕೆಲಸಗಳ ಪುನರಾವರ್ತನೆ. ಇಂಥ ಮಕ್ಕಳ ಮೇಲೆ ಯಾವ ತಂದೆ ತಾಯಿಗೆ ಭರವಸೆ ಹುಟ್ಟಲು ಸಾಧ್ಯ?

ಅಪ್ಪನ ಸಾವು ನನ್ನ ಬದುಕಿನ ದಾರಿಯನ್ನೆ ಬದಲಿಸಿಬಿಟ್ಟಿತು. ಹನ್ನೊಂದಕ್ಕೆ ನನ್ನ ಬಾಲ್ಯವೂ ಮುಗಿದು ಹೋಯಿತು.

50–60 ಜನರಿದ್ದ ಕೂಡು ಕುಟುಂಬ ಒಡೆದು ಬೇರೆಯಾಗಿ ಹೊಟ್ಟೆಗಿಲ್ಲದೆ, ಬಟ್ಟೆಗೂ ಪರದಾಡಿ ಹೊಟ್ಟೆ ಕಟ್ಟಿ ತುಸು ಪಿತ್ರಾರ್ಜಿತ ಆಸ್ತಿಯ ಜೊತೆಗೆ ಒಂದಿಷ್ಟು ಜಮೀನು ಕೊಂಡು ನಾನು ಹುಟ್ಟುವ ವೇಳೆಗೆ ಅಪ್ಪ ಅಮ್ಮ ಮಂಗಳೂರು ಹೆಂಚಿನ ಮನೆ ಕಟ್ಟಿದ್ದರು. ಅಪ್ಪನ ಗೆಳೆಯ ವೈಷ್ಣವರ ಪೂಜಾರಪ್ಪ ಊರಲ್ಲಿ ಉಪಾದಾನ ಸಂಗ್ರಹಿಸಿ ನಾಲ್ಕಾಣೆ, ಎಂಟಾಣೆಗೆ ಕೊಟ್ಟು ಹೋಗುತ್ತಿದ್ದನಂತೆ. ಆತನ ಬಗ್ಗೆ ಅಪ್ಪನಿಗೆ ಅಪಾರ ಪ್ರೀತಿ, ಗೌರವಗಳಿದ್ದವು. ಆದರೆ ನಾನು ಹುಟ್ಟುವ ಹೊತ್ತಿಗೆ ಮನೆಯಲ್ಲಿ ಹಸಿವಿನ ತೊಂದರೆ ತುಸು ನೀಗಿತ್ತು. ಹುಟ್ಟಿದ ಏಳು ವರ್ಷಕ್ಕೆ ಅಕ್ಕನ ಮದುವೆಯಾಯಿತು. ಎಲ್ಲವೂ ಸರಿಯಾಯಿತು ಎನ್ನುವಾಗ ಅಪ್ಪನಿಗೆ ಕರುಳಿನ ಕ್ಯಾನ್ಸರಿರುವುದು ಪತ್ತೆಯಾಯಿತು. ಮೇಷ್ಟರಾಗಿದ್ದ ಮಾವ ಮತ್ತು ಮಗನಂತಿದ್ದ ಭಾವ ಇಬ್ಬರೂ ಸೇರಿ ಕಿದ್ವಾಯಿ ಆಸ್ಪತ್ರೆಗೆ ಸೇರಿಸಿ ಆಪರೇಷನ್ನು ಮಾಡಿಸಿದ್ದರು. ತಿಂಗಳು ಗಟ್ಟಲೆ ಆಸ್ಪತ್ರೆಯಲ್ಲಿದ್ದರೂ ನಾವು ಮಕ್ಕಳ್ಯಾರೂ ಹೋಗಿ ನೋಡಲಾಗಿರಲಿಲ್ಲ. ಅಮ್ಮ ಬರೀ ಅಳುತ್ತಿದ್ದರು. ಅಮ್ಮನ ಮುಖ ನೋಡಿದಾಗ ಇನ್ನು ಯಾವ ತಪ್ಪು ಮಾಡಬಾರದೆನ್ನಿಸುತ್ತಿತ್ತು. ದುಡಿಮೆ, ಬರೀ ದುಡಿಮೆ. ದುಡಿಮೆ ತಪ್ಪಿಸಿಕೊಳ್ಳಲು ಸ್ಕೂಲಿಗೆ ಓಡುತ್ತಿದ್ದೆ. ಅಪ್ಪ ಮನೆಗೆ ಬಂದರು. ಹೊಟ್ಟೆಯ ಮೇಲೆ ಚೀಲ ಕಟ್ಟಿದ್ದರು. ಅದನ್ನು ತೊಳೆದು ಶುದ್ಧ ಮಾಡುವ ಕೆಲಸವನ್ನು ಚಿಕ್ಕ ಅಣ್ಣ ಮಾಡುತ್ತಿದ್ದ. ಅದನ್ನು ನೋಡಿ ಅಪ್ಪ ತಾನು ಬದುಕಬಾರದಿತ್ತೆಂದು ಕೊರಗುತ್ತಿದ್ದರು. ನಿಧಾನಕ್ಕೆ ಅದಕ್ಕೂ ಹೊಂದಿಕೊಂಡರು. ಅಲ್ಲಿಂದಾಚೆಗೆ ಅಪ್ಪ ಬದುಕಿದ್ದು ಮೂರು ವರ್ಷಗಳು ಮಾತ್ರ. ಅವು ನನ್ನ ಪಾಲಿಗೆ ಅತ್ಯಂತ ಅಮೂಲ್ಯ ಗಳಿಗೆಗಳು. ದನ ಕುರಿ ಎಮ್ಮೆ ಮೇಯಿಸಲು ಅಪ್ಪನ ಜೊತೆ ಹೋಗುತ್ತಿದ್ದೆ. ಮಕ್ಕಳಿಗೆ ಹೇಳಬಹುದಾದ ಕತೆಗಳನ್ನು ಹೇಳಿದರು. ಓದುವುದರ ಮಹತ್ವ ವಿವರಿಸಿದರು. ನನ್ನೊಳಗಿದ್ದ ಸಿಟ್ಟು, ವಿಷಗಳನ್ನು ನಿಧಾನಕ್ಕೆ ಹಿಂಡಿ ತೆಗೆಯುತ್ತಾ ಹೋದರು. ನಾನು ಅಪ್ಪ ಅಮ್ಮನಿಗೆ ಬೇಡದ ಮಗುವಲ್ಲ ಎಂಬ ಭಾವವನ್ನು ಸೃಷ್ಟಿಸುವ ಕೆಲಸದಲ್ಲಿ ಅಪ್ಪ ಗೆದ್ದಿದ್ದರು. ಬಹಳ ಗಂಭೀರ ಸ್ವಭಾವದ ಅಪ್ಪ ತಮಾಷೆ ಮಾಡುತ್ತಿದ್ದರು. ಕಡೆ ಕಡೆಗೆ ತಾನು ಬಹಳ ದಿನ ಬದುಕುವುದಿಲ್ಲ, ಅಮ್ಮನಿಗೆ ಕಾಟ ಕೊಡಬಾರದು, ಅವಳ ಕಣ್ಣಲ್ಲಿ ನೀರು ತರಿಸಬಾರದು ಎಂದು ಹೇಳಿ ಕಣ್ಣ ಕೊನೆಗೆ ಬಂದು ಕೂರುತ್ತಿದ್ದ ಹನಿಯನ್ನು ಹೊದ್ದುಕೊಂಡಿರುತ್ತಿದ್ದ ದುಪ್ಪಟಿಯಿಂದ ಒರೆಸಿಕೊಳ್ಳುತ್ತಿದ್ದರು. ಅಪ್ಪ ಇಲ್ಲದ ಮಗು ಹಾದಿ ತಪ್ಪಿತೆಂಬ ಕೆಟ್ಟ ಹೆಸರನ್ನು ಮಾತ್ರ ತರಬಾರದು ಎಂದು ಕುರಿ ಮೇಯಿಸುವಾಗ ಮಲ್ಲಣ್ಣನ ಮಾವಿನ ತೋಪಿನ ಬಳಿ ಆರ್ದ್ರವಾಗಿ ಮುಖ ನೋಡಿದ್ದರು. ಇಷ್ಟು ವರ್ಷಗಳ ನಂತರವೂ ಆ ನೋಟವನ್ನು ಮರೆಯಲಾಗದು ನನಗೆ.

ಯಾವ ಭೀಕರ ಹೊಡೆತಗಳು, ಅಸಂಖ್ಯಾತ ಮೆಣಸಿನ ಕಾಯಿ ಊದರಗಳೂ ನನ್ನನ್ನು ಪಳಗಿಸಲಾಗಿರಲಿಲ್ಲ. ಆದರೆ ಅಪ್ಪ, ಅಮ್ಮನ ದುಃಖ – ಸಂಕಟಗಳು ಮಾತ್ರ ಬಡಿದು ಬಡಿದು ಪಳಗಿಸಲಾರಂಭಿಸಿದವು. ಇದರ ನಡುವೆ ಮದುವೆಯಾಗಿ ಹೊಸದಾಗಿ ಬಂದಿದ್ದ ಅತ್ತಿಗೆಯ, ಅಮ್ಮನ ಒಡವೆ, ಸೀರೆಗಳನ್ನು ಕಳ್ಳರು ಮನೆಗೆ ನುಗ್ಗಿ ಕದ್ದುಕೊಂಡು ಹೋದರು. ಅಮ್ಮ ಸಂಕಟಕ್ಕೆ ಬೈದುಕೊಂಡರೆ ಒಂದಿಡೀ ಗುಂಪು ಬಂದು ಜಗಳಕ್ಕೆ ನಿಲ್ಲುತ್ತಿತ್ತು. ಆ ಗುಂಪಿಗೆ ಜಾಲಪ್ಪನವರ ಸಪೋರ್ಟಿತ್ತು. ಪೊಲೀಸರು ಅವರನ್ನು ಏನೂ ಮಾಡಲಿಲ್ಲ. ಅಪ್ಪ ಇದರಿಂದ ಇನ್ನಷ್ಟು ಜರ್ಝರಿತರಾಗಿ ಹೋದರು.

ಸಾವು ಹೇಗಿರುತ್ತದೆಂದು ಮೊದಲು ನೋಡಿದೆ.

86 ರ ಆಷಾಢ. ಪುಟ್ಟ ಮಗುವಿನ ತಾಯಿ ಅಕ್ಕ. ಅಪ್ಪ ಸುಸ್ತಾಗಿದ್ದರು. ಕ್ಯಾನ್ಸರು ಮತ್ತೆ ಒಳಗೇ ಆವರಿಸಿ ಬಿಟ್ಟಿತ್ತು. ನೋಡಬೇಕೆಂದು ಹೇಳಿ ಅಕ್ಕ ಭಾವನನ್ನು ಕರೆಸಿಕೊಂಡಿದ್ದರು. ಅಂದು ಶನಿವಾರ , ಸೂರ್ಯ ತನ್ನ ಕೆಲಸ ಮುಗಿಸಿ ಎರಡು ಗಂಟೆಯಾಗಿರಬಹುದು. ಅಪ್ಪ ಹುಟ್ಟಿದ್ದ ದಿನವೂ ಶನಿವಾರವೆ ಅಂತೆ. ಅಪ್ಪ ಮಾತಾಡುತ್ತಲೇ ಇದ್ದರು.

ಹಿಂದಿನ ರಾತ್ರಿ ’ ನನ್ನ ಕತೆ ಮುಗೀತು, ಚಿಕ್ಕವರಿಬ್ಬರ ಸ್ಕೂಲು ಬಿಡಿಸಬೇಡ ಚೆನ್ನಾಗಿ ಓದ್ಸು, ಮಕ್ಕಳನ್ನು ಚೆನ್ನಾಗಿ ನೋಡ್ಕೊ, ಎಂದು ಅಮ್ಮನಿಗೆ ಹೇಳಿದ್ದರಂತೆ. ಅಣ್ಣನಿಗೆ ’ ನಿಮ್ಮಮ್ಮ ಸುಖದ ಕುಟುಂಬದಲ್ಲಿ ಬೆಳೆದವಳು ನನ್ನನ್ನು ಕಟ್ಟಿಕೊಂಡು ಒಂದು ದಿನವೂ ಸುಖ ಕಾಣದೆ ಹೋದಳು, ಅವಳ ಕಣ್ಣಲ್ಲಿ ನೀರು ತರಿಸಬಾರದೆಂದು’ ಹೇಳಿದ್ದರಂತೆ.

ಅಕ್ಕ ಬಂದಿದ್ದಳು. ಅವಳ ಬಾಲ್ಯದ ಕುರಿತು ತಮಾಷೆ ಮಾಡಿದರು. ನಾಲ್ಕೈದು ವರ್ಷದ ನನ್ನ ತಮ್ಮನನ್ನು ದೇವನಹಳ್ಳಿಯಿಂದ ಎಂಟು ಮೈಲಿ ಕತೆ ಹೇಳಿಕೊಂಡೆ ನಡೆಸಿಕೊಂಡು ಅಕ್ಕನ ಊರಿಗೆ ಹೋಗಿದ್ದನ್ನು ನೆನಪಿಸಿಕೊಂಡರು. ಎಲ್ಲರೂ ಊಟ ಮಾಡಿದ್ದರು. ಅಪ್ಪ ಕೂಡ ಅಂದು ಗೆಲುವಾಗಿಯೇ ತುಸು ಗಂಜಿ ಕುಡಿದಿದ್ದ ನೆನಪು. ಮಾತಾಡುತ್ತಲೇ ಇದ್ದರು. ಮನೆಯಲ್ಲಿದ್ದ ಎಲ್ಲರನ್ನೂ ಒಮ್ಮೆ ಹೆಸರು ಕೇಳಿ ಕರೆದು ನೋಡಿದರು. ಕಣ್ಣಿಂದ ನೀರು ತೊಟ್ಟಿಕ್ಕಿದವು. ಅಕ್ಕ ತನ್ನ ಸೀರೆ ಸೆರಗಿನಲ್ಲಿ ಒರೆಸಿದಳು. ಮಲಗಿದ್ದವರು ಕುಡಿಯಲು ನೀರು ಕೇಳಿದರು. ಆಗ ತಾನೆ ಮನೆಗೆ ಕರೆಂಟು ಬಂದಿತ್ತು. ಅಕ್ಕ ಕುಡಿಯಲು ನೀರು ತಂದಳು. ತಲೆಯನ್ನೆತ್ತಿ ಬಾಯೊಳಗೆ ನೀರನ್ನು ತುಸು ತುಸುವೆ ಕುಡಿಸಿದಳು. ಕಡೆಯ ಗುಟುಕು ಒಳಗೆ ಹೋಗುವ ಬದಲು ಹೊರ ಬಂತು. ತಲೆ ವಾಲಿತು. ಕೈ ಪಕ್ಕಕ್ಕೆ ಚೆಲ್ಲಿಕೊಂಡಿತು. ಅಕ್ಕ ಕಿಟಾರನೆ ಕಿರುಚಿಕೊಂಡಳು. ಮನೆ ಶೋಕದೊಳಗೆ ಮುಳುಗಿ ಹೋಯಿತು. ದಾಯಾದಿಯೊಬ್ಬ ಮನೆಯ ಹಿಂದಿನ ದಾರಿಯಲ್ಲಿ ಹಾಡು ಹೇಳಿಕೊಂಡು ಹೋದನಂತೆ. ಹಳ್ಳಿಗಳ ಕ್ರೌರ್ಯ, ಅಮಾನವೀಯತೆಗಳನ್ನು ಕಂಡುಂಡವರಿಗೆ ಅವುಗಳೆಂದೂ ಆಪ್ತವೆನ್ನಿಸುವುದಿಲ್ಲ.

ಸಾವು ಇಷ್ಟು ಸುಲಭವಾಗಿ ಬಂದು ಕರೆದೊಯ್ಯುತ್ತದೆಯೆ ಎಂದು ಈಗಲೂ ಕೆಲವೊಮ್ಮೆ ಅನ್ನಿಸುತ್ತದೆ. ಉದ್ಯೋಗಕ್ಕೆ ಸೇರಿದ ಮೇಲೆ ಗಂಡ, ಗಂಡನ ಮನೆಯವರ ಕಿರುಕುಳ, ಅತ್ಯಾಚಾರಕ್ಕೆ ಬಲಿಯಾದ ಅನೇಕ ಹೆಣ್ಣು ಮಕ್ಕಳು ಬೆಂಕಿ ಹಚ್ಚಿಕೊಂಡೊ, ವಿಷ ಕುಡಿದೊ ಸಾಯುವಾಗಿನ ಕಟ್ಟ ಕಡೆಯ ಮಾತುಗಳನ್ನು ರೆಕಾರ್ಡ್ ಮಾಡಿಕೊಳ್ಳುವ ಅತ್ಯಂತ ಸಂಕಟದ ಸಮಯದಲ್ಲಿ, ನಾನು ಹುಟ್ಟಲೇಬಾರದಿತ್ತು, ಹೊಟ್ಟೆಯಲ್ಲಿದ್ದ ನನ್ನನ್ನು ತೊಳೆದುಕೊಳ್ಳಲೆತ್ನಿಸಿದ್ದ ಅಮ್ಮನ ಪ್ರಯತ್ನ ಫಲಿಸಿಬಿಡಬೇಕಿತ್ತು ಅನ್ನಿಸಿದ್ದಿದೆ. ಒಮ್ಮೆ ಗೊಂಬೆಯಂತಹ ಸ್ನಾತಕೋತ್ತರ ಪದವಿ ಮುಗಿಸಿದ್ದ ಪುಟ್ಟ ಹೆಣ್ಣು ಮಗಳೊಬ್ಬಳು ತನ್ನ ಎರಡು ವರ್ಷದ ಪುಟ್ಟ ಮಗಳನ್ನು ’ಕ್ರೂರಿ ಗಂಡನ ಕೈಗೆ ಕೊಡಬೇಡಿ ನಿಮ್ಮ ದಮ್ಮಯ್ಯ, ಅಷ್ಟೆ ನನ್ನ ಕೋರಿಕೆ, ನನ್ನ ಕಣ್ಣ ಮುಂದೆಯೆ ಗಂಡ ಹಾದರ ಮಾಡಿದ. ಹೇಗೆ ಬದುಕಿರಲಿ ನಾನು? ದೇವರು ಅವನಿಗೆ ಜಾಸ್ತಿ ದಾಹ ಕೊಟ್ಟಿದ್ದಾನೆ ಏನು ಮಾಡಲಿ? ಏನು ಮಾಡುವುದು ಹೇಳಿ? ನೋಡಿ ಬೆಂಕಿ ಹಚ್ಚಿದ, ಇಲ್ಲ ಇಲ್ಲ ನಾನೆ ಬೆಂಕಿ ಹಚ್ಚಿಕೊಂಡೆ’ ಎಂದು ನರಳಿದಳು. ಅಷ್ಟು ಹೇಳುವುದಕ್ಕೆ ಬದುಕಿದ್ದಳೇನೊ ಎಂಬಂತೆ ಕಣ್ಣ ಮುಂದೆಯೆ ಪ್ರಾಣ ಬಿಟ್ಟಳು.

ಇಂತವು ಎಷ್ಟೊ ಜೀವಗಳ ಸಂಕಟಗಳು ನನ್ನನ್ನು ಛಿದ್ರ ಮಾಡಿವೆ. ಅಂಥ ಗಳಿಗೆಗಳಲ್ಲೆಲ್ಲ ಅಪ್ಪನ ಸಾವು ಕದಡಿ ಕಾಡಿ ಕಣ್ಣ ಮುಂದೆ ನಿಲ್ಲುತ್ತದೆ.

ಅಪ್ಪ ನೋಡುವುದಕ್ಕೆ ಹೇಗಿದ್ದರು ಎಂದು ಕಲ್ಪಿಸಿಕೊಂಡರೂ ಮಬ್ಬು ಮಬ್ಬಾಗಿ ಮಾತ್ರ ನೆನಪಾಗುತ್ತದೆ. ತಮ್ಮನಿಗೆ ಒಂದಿಷ್ಟೂ ನೆನಪಿಲ್ಲ. ಅಪ್ಪನ ಫೋಟೊ ಇಂದಿಗೂ ಸಿಗಲಿಲ್ಲ. ಅಕ್ಕನ ಮದುವೆಯಲ್ಲಿ ಫೋಟೊ ತೆಗೆಸಿಕೊಂಡಿರಲಿಲ್ಲವೆ? ಆಸ್ಪತ್ರೆಯಲ್ಲಿ? ಎಲ್ಲಿಯೂ ಇಲ್ಲ. ಹೊಟ್ಟೆಯಲ್ಲಿದ್ದ ಮಗು ಹುಟ್ಟಬಾರದೆಂದು ನಾಟಿ ಔಷಧ ತಿಂದು ಬದುಕುತ್ತಾಳೊ ಇಲ್ಲವೊ ಎಂಬಂತಿದ್ದ ಅಮ್ಮನ ಫೋಟೊವನ್ನು ಅಪ್ಪನೇ ಬಲವಂತ ಮಾಡಿ ತೆಗೆಸಿದ್ದರು. ಆದರೆ ತಾನು ಮಾತ್ರ ಎಲ್ಲೂ ದಾಖಲಾಗದೆ ನಮ್ಮ ಮನಸ್ಸಿನ ಮೇಲೆ ಮಾತ್ರ ಶಾಶ್ವತ ಸಂಕಟವನ್ನು ಹೊರಿಸಿ ಹೋದರು. ಹೆತ್ತವರು, ಆಪ್ತರನ್ನು ಕಳೆದುಕೊಂಡು ಸಂಕಟ, ವಿಷಾದಗಳನ್ನು ಎದೆಯೊಳಗಿಟ್ಟು ಕಾವು ಕೊಡುತ್ತಾ ಬದುಕುವ ಯಾವ ಮಕ್ಕಳೂ ಲೋಕ ಕಂಟಕರಾಗಲಾರರೆಂಬುದು ನನ್ನ ಭಾವನೆ. ಅಪ್ಪನ ಫೋಟೊಗಾಗಿ ಎಷ್ಟು ಹುಡುಕಿದ್ದು, ಅದು ಸಿಗಲೇ ಇಲ್ಲ. ಹೈಸ್ಕೂಲಿನವರೆಗೆ ಹಣಬೆಯೆಂಬ ಊರಿನ ಸ್ಕೂಲಿನಲ್ಲಿ ಓದಿದ್ದ ಅಪ್ಪ ಸರ್ಕಾರಿ ಉದ್ಯೋಗಕ್ಕೆ ಹೋಗದೆ ಭಜನಾ ಮಂಡಳಿ ಕಟ್ಟಿಕೊಂಡು, ಹೊಲದ ಕೆಲಸ ಮಾಡಿಕೊಂಡು ಊರಿಗೆ ಉಪಕಾರಿಯಾಗಿ ಬದುಕಿದ್ದರು. ಅಪ್ಪನ ತುಂಟತನದ ಬಗ್ಗೆ ನನಗೆ ಗೊತ್ತಿರುವ ಮಾಹಿತಿ ಒಂದೆ; ಸೈಕಲ್ಲು ಕಲಿಯಲು ಬಾಡಿಗೆಗೆ ಪಡೆದು ಮೂವರು ಸ್ನೇಹಿತರು ಹತ್ತಿ ಕೂತು ಹಳ್ಳಕ್ಕೆ ಬಿದ್ದು ಅದು ಮುರಿದು ಹೋದಾಗ ತುಂಬಿದ ಕೆರೆಗೆ ಎಸೆದು ಮನೆಗೆ ಬಂದಿದ್ದರಂತೆ. ಕಡೆಗೆ ಮನೆಯಲ್ಲಿ ಒದೆ ತಿಂದು ಸೈಕಲ್ಲಿಗೆ ದುಡ್ಡು ಕಟ್ಟಿದ್ದರಂತೆ.

ಇಷ್ಟು ವರ್ಷವಾದರೂ ಅಪ್ಪ ಬೆಂಬಿಡದೆ ಕಾಡುತ್ತಲೇ ಇದ್ದಾರೆ. ನೆನಪಾಗಿ ಎದೆಯೊಳಗೆ ಕೂತು ಮಾತಾಡುತ್ತಾರೆ. ಹೊಲಕ್ಕೆ ಕೆರೆಯ ಗೋಡು ತುಂಬುವಾಗ, ತಿಪ್ಪೆಗೆ ಸೊಪ್ಪು ತುಂಬುವಾಗ, ಕಣಗಾಲದ ರಾತ್ರಿಗಳಲ್ಲಿ ನಕ್ಷತ್ರಗಳ ಹರಿವು ನೋಡುವಾಗ, ಪಟ್ಟ ಬಿಟ್ಟ ಗಾಡಿಗೆ ಪಟ್ಟ ಕಟ್ಟಿಸುವಾಗ, ಕಂಡವರ ಕಾಸಿಗೆ ಕೈಯೊಡ್ಡಬಾರದು ಎನ್ನುವಾಗ, ಯಾವ ಕಾರಣಕ್ಕೂ ಅಂತರಂಗದ ಮುಂದೆ ತಲೆಬಾಗಿಸಿ ಕ್ಷಮೆ ಕೇಳುವ ಕೆಲಸ ಮಾಡಬಾರದು ಎನ್ನುವಾಗ, ಅತ್ಯಂತ ಸಂಕಟದ ಸಮಯಗಳಲ್ಲಿ ನಗುವುದನ್ನು ಅಭ್ಯಾಸ ಮಾಡುತ್ತಿದ್ದಾಗ ಅಪ್ಪ ನೆನಪಾಗಿದ್ದಾರೆ, ನೆನಪಾಗುತ್ತಾರೆ. ಉರಿಬಿಸಿಲಿಗೆ ಅಡ್ಡ ನಿಂತ ಮಾವಿನ ಮರದಂತೆ ನನ್ನ ಅಪ್ಪ ನನ್ನ ಜೊತೆಯೇ ಬದುಕುತ್ತಿದ್ದಾರೆ.

ನನ್ನ ಪುಟ್ಟ ಮಗಳು ಅಪ್ಪಂದಿರ ದಿನಕ್ಕೆಂದು ಚಿತ್ರ ಬರೆದು ಶುಭ ಕೋರಿದಾಗ, ನನ್ನ ಅಪ್ಪನಿಗೆ ಇಂಥ ಸಂತಸ ಜೀವನದಲ್ಲಿ ಸಿಗದೆ ಹೋಯಿತಲ್ಲ ಎಂಬ ದುಃಖ ಹಿಂಡುತ್ತದೆ. ಅದು ನನ್ನ ಜೀವದ ಜೊತೆಯಲ್ಲೆ ಬದುಕುತ್ತಿದೆ.

ಹೀಗಲ್ಲದೆ
ನನ್ನ ಅಪ್ಪನಿಗೆ ನಾನು ಹೇಗೆ ಶುಭಾಶಯಗಳನ್ನು ಹೇಳಲಿ?

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T